ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಒಟ್ಟು ಪ್ರಶ್ನೆಗಳು – ೬೯**

**ಪಟ್ಟಿ – ೧೩**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತೈದನೇ ಅಧಿವೇಶನ

**ಬುಧವಾರ, ದಿನಾಂಕ : ೦೯ನೇ ಜುಲೈ, ೨೦೧೪**

---

**ಸಮೂಹ – III**

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

---

# ಐ.ಟಿ.ಐ ಗಳಲ್ಲಿ ಅಳವಡಿಸಲಾಗಿರುವ ಉತ್ಕೃಷ್ಟ ಕೇಂದ್ರ (Centre of Excellence)

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :-**

೭೭೭ (೯೮೧) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಐ.ಟಿ.ಐ ಗಳಲ್ಲಿನ ಉತ್ಕೃಷ್ಟ ಕೇಂದ್ರ (Centre of Excellance) ಪರೀಕ್ಷಾ ಫಲಿತಾಂಶವು ವರ್ಷದಿಂದ ವರ್ಷಕ್ಕೆ ಕಳಪೆ ಮಟ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಅದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; ಪಾಸಾಗುವ ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಶಿಕ್ಷಕರ ನೇಮಕಾತಿ ಹಾಗೂ ನೇರ ನೇಮಕಾತಿಯಲ್ಲಿ ಯಾವ ರೀತಿಯ ವ್ಯವಸ್ಥೆಗಳನ್ನು ಕೈಗೊಳ್ಳಲಾಗಿದೆ (ವಿವರ ಒದಗಿಸುವುದು) ;

(ಆ) ಸಾಮಗ್ರಿಗಳನ್ನು ಅತೀ ದುಬಾರಿ ಬೆಲೆಯಲ್ಲಿ ಖರೀದಿಸಿ ಸರ್ಕಾರಕ್ಕೆ ಆರ್ಥಿಕ ನಷ್ಟವನ್ನುಂಟು ಮಾಡುತ್ತಿರುವುದು ಹಾಗೂ ಕಟ್ಟಡದ ಅಲಭ್ಯತೆಯ ನೆಪವೊಡ್ಡಿ ಸಾಮಗ್ರಿಗಳನ್ನು ಕೊಳೆಯಲು ಬಿಟ್ಟಿರುವುದು ಮತ್ತು ತರಬೇತಿಗೆ ಉಪಯೋಗಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕಾರಣಕರ್ತರ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ ;

(ಇ) ಉತ್ಕೃಷ್ಟ ಕೇಂದ್ರಕ್ಕಾಗಿ ೨೦೦೬ ರಿಂದ ಇಲ್ಲಿಯವರೆಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಸೂಕ್ತ ಬಳಕೆಗಾಗಿ ಹಾಕಿಕೊಂಡ ಯೋಜನೆಗಳ ಹಾಗೂ ಬಳಸಲಾದ ಬಜೆಟ್‌ನ ವರ್ಷವಾರು ವಿವರಗಳನ್ನು ಐ.ಟಿ.ಐ ವಾರು ಸಂಪೂರ್ಣ ವಿವರ ಒದಗಿಸುವುದು ;

(ಈ) ಉತ್ಕೃಷ್ಟ ಕೇಂದ್ರಕ್ಕಾಗಿ ೨೦೦೬ ರಿಂದ ಇಲ್ಲಿಯವರೆಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಒಟ್ಟು ಅನುದಾನ ಎಷ್ಟು ; ಅದರಲ್ಲಿ ಎಷ್ಟು ಅನುದಾನವನ್ನು ಯಾವ ಯಾವ ಕೆಲಸಕ್ಕಾಗಿ ವೆಚ್ಚ ಮಾಡಲಾಗಿದೆ ; (ಐ.ಟಿ.ಐ ವಾರು ಸಂಪೂರ್ಣವಾರು ವಿವರ ಒದಗಿಸುವುದು)

(ಉ) ಉತ್ಕೃಷ್ಟ ಕೇಂದ್ರಕ್ಕಾಗಿ ಕೇಂದ್ರ ಕಛೇರಿ ಹಾಗೂ ಐ.ಟಿ.ಐ ಕಛೇರಿ ಮಟ್ಟದಲ್ಲಿ ಯಾವ ಯಾವ ಸಾಮಗ್ರಿಗಳನ್ನು, ಎಷ್ಟು ಸಂಖ್ಯೆಯಲ್ಲಿ, ಯಾವ ಯಾವ ದರದಲ್ಲಿ ಯಾವ ಯಾವ ಸರಬರಾಜುದಾರರಿಂದ ಸರಬರಾಜು ಮಾಡಲಾಗಿದೆ (ಐ.ಟಿ.ಐ ವಾರು ಸಂಪೂರ್ಣ ವಿವರ ಪಟ್ಟಿ ಒದಗಿಸುವುದು ಹಾಗೂ ಪ್ರಸ್ತುತ ಅಪರ ನಿರ್ದೇಶಕರು (ತರಬೇತಿ) ಇವರ ಅವಧಿಯಲ್ಲಿ ಅನುಮೋದಿಸಿದ ಮತ್ತು ಪಾವತಿಸಲಾದ ಅನುದಾನದ ವಿವರಗಳನ್ನು ಒದಗಿಸುವುದು) ?

## ಎಂ.ಇ.ಎಸ್. ಅಡಿಯಲ್ಲಿ ತರಬೇತಿ ನೀಡುತ್ತಿರುವ ವಿ.ಟಿ.ಪಿ. ಕೇಂದ್ರಗಳು

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :-**

೭೭೮ (೯೮೨) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯಾದ್ಯಂತ ಎಂ.ಇ.ಎಸ್. ಅಡಿಯಲ್ಲಿ ತರಬೇತಿ ನೀಡುತ್ತಿರುವ ವಿ.ಟಿ.ಪಿ ಕೇಂದ್ರಗಳು ನೋಂದಣಿಯಾಗಿ ಮಾನ್ಯತೆ ಪಡೆದಿರುವ ನೋಂದಣಿ ಪತ್ರಗಳ ಪ್ರತಿಗಳನ್ನು ಒದಗಿಸುವುದು ;

(ಆ) ವಿ.ಟಿ.ಪಿ. ಕೇಂದ್ರಗಳಲ್ಲಿ ತರಬೇತಿ ನೀಡುತ್ತಿರುವ ವೃತ್ತಿಗಳಿಗೆ ಅನುಸಾರವಾಗಿ ಹಣ ಪಾವತಿಗೆ ಮೊದಲು ಲಭ್ಯವಿರುವ ತರಬೇತಿದಾರರು, ಕಟ್ಟಡ, ಯಂತ್ರೋಪಕರಣಗಳ ನೈಜತೆಯನ್ನು ಪರಿಶೀಲಿಸಲಾಗಿದೆಯೇ ; ಹಾಗಿದ್ದಲ್ಲಿ, ಪರಿವೀಕ್ಷಣೆ ಮಾಡಿದ ಅಧಿಕಾರಿಯ ಹುದ್ದೆ, ಹೆಸರು, ವಿಳಾಸ ಮತ್ತು ವರದಿಯ ಪ್ರತಿಗಳನ್ನು ವಿ.ಟಿ.ಪಿ. ಕೇಂದ್ರವಾರು ಒದಗಿಸುವುದು ;

(ಇ) ಅಪರ ನಿರ್ದೇಶಕರು (ತರಬೇತಿ) ಪ್ರಭಾರ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಕೇವಲ ಎರಡು ತಿಂಗಳಲ್ಲಿ ಸುಮಾರು ೬ ಕೋಟಿ ರೂಪಾಯಿಗಳನ್ನು ಪಾವತಿಸಿರುವುದು ನಿಜವೇ (ಹಣ ಪಾವತಿಸಿದ ಎಲ್ಲಾ ವಿ.ಟಿ.ಪಿ. ಕೇಂದ್ರಗಳ ತರಬೇತಿ ಕಾರ್ಯಕ್ರಮಗಳ ವಿವರಗಳನ್ನು ವಿ.ಟಿ.ಪಿ. ವಾರು ಒದಗಿಸುವುದು) ?

## ಕೆರೆಗಳ ಅಭಿವೃದ್ಧಿ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :-**

೭೭೯ (೧೦೨೬) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಕೆರೆಗಳನ್ನು ಒಳಪಡಿಸುವಲ್ಲಿ ಅನುಸರಿಸುತ್ತಿರುವ ಮಾನದಂಡಗಳೇನು (ವಿವರಗಳೊಡನೆ) ;

(ಇ) ಸದರಿ ಕೆರೆಗಳ ಪೈಕಿ ಎಷ್ಟು ಕೆರೆಗಳಲ್ಲಿ ಒತ್ತುವರಿ ಮಾಡಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು) ;

(ಈ) ಸದರಿ ಕೆರೆಗಳ ಒತ್ತುವರಿ ತೆರವಿಗೆ ಹಾಗೂ ಕರೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಯಾವ ಯೋಜನೆಗಳನ್ನು ರೂಪಿಸಿದೆ (ವಿವರವಾದ ಮಾಹಿತಿ ನೀಡುವುದು) ;

(ಉ) ಸದರಿ ಕೆರೆಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಸರ್ಕಾರ ೨೦೧೪-೧೫ನೇ ಸಾಲಿನ ಮುಂಗಡ ಪತ್ರದಲ್ಲಿ ಎಷ್ಟು ಹಣ ಒದಗಿಸಿದೆ (ವಿವರ ನೀಡುವುದು) ?

## ತೆರೆದ ಕೊಳವೆ ಬಾವಿ ಮುಚ್ಚದವರಿಗೆ ಶಿಕ್ಷೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೭೮೦ (೯೮೪) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಯಾವುದೇ ನಿಯಂತ್ರಣವಿಲ್ಲದೇ ಕೊಳವೆ ಬಾವಿಗಳನ್ನು ನಿರ್ಮಿಸಿ ನೀರು ಸಿಕ್ಕದಿದ್ದಾಗ ಅವುಗಳನ್ನು ಮುಚ್ಚದೇ ಅದರಲ್ಲಿ ಮಕ್ಕಳು ಬಿದ್ದು ಅವು ಮೃತ್ಯಕೂಪಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಹಾಳಾದ ಕೊಳವೆ ಬಾವಿಗಳನ್ನು ಪತ್ತೆ ಹಚ್ಚಿ, ಮುಚ್ಚಲು ವಿಶೇಷ ಕಾರ್ಯಯೋಜನೆಯನ್ನು ರೂಪಿಸಲಾಗುವುದೆ ;

(ಇ) ಮಕ್ಕಳ ಮೃತ್ಯುಕೂಪದಂತಹ ಹಾಳಾದ ಕೊಳವೆ ಬಾವಿಗಳನ್ನು ಕೊರೆಸಿರುವ ಮಾಲೀಕರು ಮತ್ತು ಕೊರೆದ ಗುತ್ತಿಗೆದಾರರಿಗೆ ಜೈಲು ಶಿಕ್ಷೆ ವಿಧಿಸಲು ಸರ್ಕಾರ ವಿಶೇಷ ಕಾನೂನು ಕ್ರಮಗಳನ್ನು ತುರ್ತಾಗಿ ಕೈಗೊಳ್ಳುವುದೆ ?

## ಸಾಮಾಜಿಕ ಅರಣ್ಯ ಅಭಿವೃದ್ಧಿ ಯೋಜನೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೭೮೧ (೯೮೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಡಾ॥ ನಂಜುಂಡಪ್ಪ ರವರ ವರದಿ ಪ್ರಕಾರ ಹಿಂದುಳಿದ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸಾಮಾಜಿಕ ಅರಣ್ಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ;

(ಆ) ಶಾಲಾ ಮಕ್ಕಳನ್ನು ಪ್ರೋತ್ಸಾಹಿಸಿ ನಿಯತಕಾಲಿಕವಾಗಿ ಹಸಿರು ಹಬ್ಬವನ್ನು ಆಚರಿಸಲಾಗುತ್ತಿದೆಯೇ ; ಹಾಗಿದ್ದಲ್ಲಿ, ವಿವರಗಳನ್ನು ನೀಡುವುದು ;

(ಇ) ಪ್ರವಾಸಿಗರನ್ನು ಪ್ರೇರೇಪಿಸಿ ಪ್ರೇಕ್ಷಣೀಯ ಸ್ಥಳಗಳಲ್ಲಿ ಹೆಚ್ಚಿನ ಗಿಡಮರಗಳನ್ನು ನೆಡಲು ಯೋಜನೆ ಹಮ್ಮಿಕೊಳ್ಳಲಾಗುವುದೆ ?

## ಕ್ರೀಡಾಂಗಣದ ಸಂರಕ್ಷಣೆ

**ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೮೨ (೯೮೬) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿರುವ ಕ್ರೀಡಾಂಗಣಗಳೆಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಮಡಿಕೇರಿಯ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಕಾಂಕ್ರೀಟ್ ಕಟ್ಟಡಗಳು ಏಳುತ್ತಿರುವುದಕ್ಕೆ ಸಾರ್ವಜನಿಕರ ವಿರೋಧವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಕ್ರೀಡಾಂಗಣವನ್ನು ಉಳಿಸಿಕೊಳ್ಳಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು (ತಿಳಿಸುವುದು) ?

## ಹೊಸ ಜಿಲ್ಲಾಡಳಿತ ಸಮುಚ್ಚಯ

**ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೮೩ (೯೮೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ನಿರ್ಮಾಣಗೊಂಡಿರುವ ಜಿಲ್ಲಾಡಳಿತ ಸಮುಚ್ಚಯಕ್ಕೆ ಆವರಣ ತಡೆಗೋಡೆ ಮತ್ತು ಸಂಪರ್ಕ ಮೇಲುಸೇತುವೆ ರಸ್ತೆ ಅನಿವಾರ್ಯ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಈ ಎರಡೂ ಕಾಮಗಾರಿಗಳಿಗೆ ಅಂದಾಜು ಪಟ್ಟಿ ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ ;

(ಇ) ಹಾಗಿದ್ದಲ್ಲಿ, ಈ ಎರಡೂ ಕಾಮಗಾರಿಗಳಿಗೆ ತಗಲುವ ಅಂದಾಜು ಮೊತ್ತವೆಷ್ಟು ; ಸದರಿ ಕಾಮಗಾರಿಗಳು ಪ್ರಾರಂಭವಾಗುವುದು ಯಾವಾಗ (ಸಂಪೂರ್ಣ ವಿವರ ಒದಗಿಸುವುದು) ?

## ಅಂತರ್ಜಲ

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೭೮೪ (೯೮೯) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಚಿಕ್ಕಮಗಳೂರು ಜಿಲ್ಲೆ, ಕಡೂರು ಹಾಗೂ ಹಾಸನ ಜಿಲ್ಲೆ, ಬೇಲೂರು ಹಾಗೂ ಅರಸೀಕೆರೆ ತಾಲ್ಲೂಕುಗಳ ಅಂತರ್ಜಲ ಮಟ್ಟ ಸಂಪೂರ್ಣ ಕುಸಿದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಅನುಕೂಲತೆಗಾಗಿ ಕೊರೆದಿದ್ದ ಶೇ. ೮೦ರಷ್ಟು ಕೊಳವೆ ಬಾವಿಗಳು ಬತ್ತಿಹೋಗಿ ರುವುದಲ್ಲದೇ ತಮ್ಮ ಅಸ್ತಿತ್ವ ಕಳೆದುಕೊಂಡಿರುವುದು ನಿಜವೇ ;

(ಇ) ಹಾಗಿದ್ದಲ್ಲಿ, ಸದರಿ ತಾಲ್ಲೂಕುಗಳಲ್ಲಿನ ಅಂತರ್ಜಲಮಟ್ಟ ಸುಧಾರಿಸಲು ಸರ್ಕಾರದ ಮುಂದಿರುವ ತುರ್ತು ಪರ್ಯಾಯ ಮಾರ್ಗಗಳೇನು (ವಿವರಗಳನ್ನು ಒದಗಿಸುವುದು) ?

## ಕೆರೆಗಳ ಪುನರುಜ್ಜೀವನಕ್ಕಾಗಿ ಯೋಜನೆಗಳು

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೭೮೫ (೯೮೮) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು ಹಾಗೂ ಹಾಸನ ಜಿಲ್ಲೆ, ಅರಸೀಕೆರೆ ಹಾಗೂ ಬೇಲೂರು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಲಭ್ಯವಿರುವ ಎಲ್ಲಾ ಕೆರೆಗಳು ಸಾಮೂಹಿಕವಾಗಿ ಬತ್ತಿಹೋಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಕೆರೆಗಳನ್ನು ಪುನರುಜ್ಜೀವನಗೊಳಿಸಲು ಇಲಾಖೆ ಕೈಗೊಂಡ ಕ್ರಮಗಳೇನು ;

(ಇ) ಈ ಭಾಗದ ಕೆರೆಗಳಿಗೆ ನೀರು ತುಂಬಿಸಲು ಸರ್ಕಾರದ ಮುಂದಿನ ಯೋಜನೆಗಳೇನು (ವಿವರಗಳನ್ನು ಒದಗಿಸುವುದು) ?

## ಅರಣ್ಯ ಅಭಿವೃದ್ಧಿ ಕಾಮಗಾರಿಗಳಲ್ಲಿ ಅವ್ಯವಹಾರ

**ಶ್ರೀ ಘೋಟ್ನೇಕರ್ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೮೬ (೯೯೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರವಾರ ಜಿಲ್ಲೆಯಲ್ಲಿ ಅರಣ್ಯ ಇಲಾಖೆ ವತಿಯಿಂದ ಯಾವ ಯಾವ ಯೋಜನೆಯಡಿ ಅಭಿವೃದ್ಧಿ ಕಾಮಗಾರಿ ನಡೆದಿರುತ್ತದೆ (ವಿಭಾಗವಾರು, ವಲಯವಾರು, ಶೀರ್ಷಿಕೆವಾರು ಮಾಹಿತಿ ನೀಡುವುದು) ;

(ಆ) ಸದರಿ ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗೆ ನೀಡಲಾದ ಅನುದಾನ ಸಮರ್ಪಕವಾಗಿ ಬಳಕೆಯಾಗಿರುತ್ತಿದೆಯೇ (ವಿವರ ನೀಡುವುದು) ;

(ಇ) ಕೆಲವೊಂದು ಕಡೆ ಕಟ್ಟಡ ಅಭಿವೃದ್ಧಿ ಕಾರ್ಯಗಳಿಗೆ ನೀಡಲಾದ ಅನುದಾನ ಕಳಪೆ ಮಟ್ಟದ ಕಾಮಗಾರಿ ಮಾಡಿ ದುರುಪಯೋಗ ವಾಗಿರುವ ಬಗ್ಗೆ ತಿಳಿದು ಬಂದಿರುತ್ತದೆ ; ಇದು ನಿಜವೇ (ವಿವರ ನೀಡುವುದು) ?

## ಬಾಲಕಾರ್ಮಿಕ ಪದ್ಧತಿ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೮೭ (೯೯೩) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಬಾಲಕಾರ್ಮಿಕರನ್ನು ಗುರುತಿಸುವಲ್ಲಿ ಇಲಾಖೆಯು ಕೈಗೊಂಡ ಕ್ರಮಗಳೇನು ;

(ಆ) ಇದುವರೆವಿಗೂ ಗುರುತಿಸಿರುವ ಬಾಲಕಾರ್ಮಿಕರ ಒಟ್ಟು ಸಂಖ್ಯೆ ಎಷ್ಟು ;

(ಇ) ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನ ಮಾಡುವಲ್ಲಿ ಇಲಾಖಾಧಿಕಾರಿಗಳು ಸಮರ್ಪಕವಾಗಿ 'ಕಾರ್ಯ ನಿರ್ವಹಿಸುತ್ತಿದ್ದಾರೆಯೇ ; ಇಲ್ಲದಿದ್ದಲ್ಲಿ, ಇಂತಹವರ ಮೇಲೆ ಕೈಗೊಂಡ ಕ್ರಮಗಳೇನು ;

(ಈ) ಬಾಲಕಾರ್ಮಿಕರಿಗೆ ನ್ಯಾಯ ದೊರಕಿಸಿ, ಶಿಕ್ಷಣ ನೀಡಲು ಯಾವ ಕ್ರಮ ಕೈಗೊಳ್ಳಲಾಗಿದೆ ;

(ಉ) ಇದುವರೆವಿಗೂ ಶಿಕ್ಷಣ ನೀಡಿರುವ ಬಾಲಕಾರ್ಮಿಕರ ಒಟ್ಟು ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ?

## ಅಂತರ್ಜಲದ ಕುಸಿತ ತುಂಬದಕೆರೆ ಅಸಮರ್ಪಕ ವಿದ್ಯುತ್ ಪೂರೈಕೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೮೮ (೯೯೪) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನೆಲಮಂಗಲದ ಭಾಗದಲ್ಲಿ ಕಳೆದ ಐದಾರು ವರ್ಷಗಳಿಂದ ವಾಡಿಕೆ ಪ್ರಮಾಣದಲ್ಲಿ ಮಳೆಯಾಗದೆ ಕೆರೆಗಳು ತುಂಬದೆ, ಅಂತರ್ಜಲ

ಮಟ್ಟ ಕುಸಿದು ಕುಡಿಯುವ ನೀರಿಗೂ ಬವಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಲೋಡ್ ಶೆಡ್ಡಿಂಗ್‌ನಿಂದ ವಿದ್ಯುತ್ ಪೂರೈಕೆ ಸಮರ್ಪಕವಾಗಿಲ್ಲದೆ ಸಣ್ಣ ಕೈಗಾರಿಕೆಗಳು, ಮಗ್ಗಗಳು ಸಮರ್ಪಕ ಉತ್ಪಾದನೆ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ವಿದ್ಯುತ್ ಅಭಾವದಿಂದ ಟ್ಯಾಂಕರ್ ನೀರನ್ನು ಸಮರ್ಪಕವಾಗಿ ಪೂರೈಕೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ನೆಲಮಂಗಲ ತಾಲ್ಲೂಕಿನ ೧೮೬೦ ಕೊಳವೆ ಬಾವಿಗಳಲ್ಲಿ ೧೨೪೦ಕ್ಕೂ ಹೆಚ್ಚು ಬತ್ತಿವೆ. ೬೪೦ರಲ್ಲಿ ಅಲ್ಪಮಟ್ಟದ ನೀರು ಲಭ್ಯವಿದ್ದು, ೧೨೦೦ ಅಡಿ ಕೊರೆದರೂ ನೀರು ಸಿಗದಿರುವುದರಿಂದ ಸಾರ್ವಜನಿಕರು ಕಷ್ಟಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬತ್ತಿ ಹೋಗಿರುವ ಕೊಳವೆ ಬಾವಿಗಳ ದುರಸ್ತಿ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ;

(ಊ) ಶಾಶ್ವತ ಕುಡಿಯುವ ನೀರಿನ ಯೋಜನೆಯ ಅನುಷ್ಠಾನದ ಬಗ್ಗೆ ಸರ್ಕಾರದ ಕ್ರಮವೇನು ;

(ಋ) ಕುಲವನಹಳ್ಳಿ ಕೆರೆ ಅಭಿವೃದ್ಧಿ ಯೋಜನೆ ಯಾವ ಹಂತದಲ್ಲಿದೆ (ವಿವರ ನೀಡುವುದು) ?

## ೯೪ಸಿ, ೫೦, ೫೩ ನಿವೇಶನಗಳ ಅರ್ಜಿಗಳ ಮಂಜೂರಾತಿ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೮೯ (೯೯೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ನಿವೇಶನಕ್ಕಾಗಿ ಕೋರಿ ಬಂದ ಅರ್ಜಿಗಳ ಮಂಜೂರಾತಿಯಲ್ಲಿನ ಮಾನದಂಡವೇನು ; ಆದಾಯದ ಮಿತಿಯೆಷ್ಟು ;

(ಆ) ೯೪ಸಿ ಅಡಿಯಲ್ಲಿ ಬಂದ ಅರ್ಜಿಗಳ ಮಂಜೂರಾತಿಯಲ್ಲಿನ ಮಾನದಂಡವೇನು ; ಆದಾಯದ ಮಿತಿಯೆಷ್ಟು ;

(ಇ) ಅರ್ಜಿ ನಮೂನೆ ೫೦ರಡಿಯಲ್ಲಿ ಮತ್ತು ಅರ್ಜಿ ನಮೂನೆ ೫೩ರಡಿಯಲ್ಲಿ ಬಂದ ಅರ್ಜಿಗಳ ಮಂಜೂರಾತಿಯಲ್ಲಿನ ಮಾನ ದಂಡವೇನು ; ಆದಾಯದ ಮಿತಿಯೆಷ್ಟು ;

(ಈ) ಅಕ್ರಮಗಳಿಗೆ ರಿಯಾಯಿತಿ ಸಕ್ರಮಗಳಿಗೆ ಶಿಕ್ಷೆಯೆಂಬ ನೀತಿಯನ್ನು ಸರಿಪಡಿಸಲಾಗುವುದೇ ?

## ವರಾಹಿ ನೀರಾವರಿ ಯೋಜನೆಯಲ್ಲಿ ಅವ್ಯವಹಾರ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೯೦ (೧೦೦೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವರಾಹಿ ನೀರಾವರಿ ಯೋಜನೆಯಿಂದ ರೈತರ ಕೃಷಿ ಭೂಮಿಗೆ ಯಾವಾಗ ನೀರನ್ನು ಒದಗಿಸಲಾಗುವುದು (ಏತ ನೀರಾವರಿಯನ್ನು ಹೊರತುಪಡಿಸಿ) ;

(ಆ) ಈ ಯೋಜನೆಯಲ್ಲಿ ನಡೆದಿರುವ ಕೋಟ್ಯಾಂತರ ರೂಪಾಯಿ ಅವ್ಯವಹಾರ ಹಾಗೂ ಅನುದಾನದ ದುರುಪಯೋಗವನ್ನು ಇಲ್ಲಿಯ ತನಕ ಸಿ.ಬಿ.ಐ. ತನಿಖೆಗೆ ಅಥವಾ ಲೋಕಾಯುಕ್ತ ತನಿಖೆಗೆ ವಹಿಸದೇ ಇರಲು ಕಾರಣವೇನು ;

(ಇ) ವರಾಹಿ ನೀರಾವರಿ ಇಲಾಖೆಯ ಅಧಿಕಾರಿಗಳ ಹಾಗೂ ಗುತ್ತಿಗೆದಾರರಿಂದ ಸರ್ಕಾರಕ್ಕೆ ಆಗಿರತಕ್ಕಂತಹ ನಷ್ಟಕ್ಕೆ ಯಾರನ್ನು ಹೊಣೆ ಮಾಡಲಾಗುವುದು ?

## ಸರಕಾರಿ ಹಾಗೂ ಅನುದಾನಿತ ಐ.ಟಿ.ಐ.ಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೯೧ (೯೯೯) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಸರಕಾರಿ ಹಾಗೂ ಅನುದಾನಿತ ಐ.ಟಿ.ಐ.ಗಳ ಸಂಖ್ಯೆ ಎಷ್ಟು ; ಈ ಐ.ಟಿ.ಐ.ಗಳಲ್ಲಿ ಲಭ್ಯವಿರುವ ಸೀಟುಗಳ ಸಂಖ್ಯೆ ಎಷ್ಟು ; ಕಳೆದ ಶೈಕ್ಷಣಿಕ ವರ್ಷದಲ್ಲಿ ಈ ಸಂಸ್ಥೆಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; ಖಾಲಿ ಉಳಿದಿರುವ ಸೀಟುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು, ಸಂಸ್ಥೆವಾರು ವಿವರ ನೀಡುವುದು) ;

(ಆ) ೨೦೧೪-೧೫ನೇ ಸಾಲಿನಿಂದ ಹೊಸ ಸರಕಾರಿ ಐ.ಟಿ.ಐ ಕಾಲೇಜುಗಳನ್ನು ಪ್ರಾರಂಭಿಸುವ ಯೋಜನೆ ಸರಕಾರದ ಮುಂದಿದೆಯೇ ; ಇದ್ದಲ್ಲಿ, ಈ ಕಾಲೇಜುಗಳಿಗೆ NCVT ಯಿಂದ ಶಾಶ್ವತ ಮಾನ್ಯತೆ ಪಡೆಯಲಾಗಿದೆಯೇ ; ಇಲ್ಲವಾದಲ್ಲಿ, ಈ ಸಂಸ್ಥೆಗಳಲ್ಲಿ ಪ್ರವೇಶ ಪಡೆದುಕೊಳ್ಳುವ ಶಿಕ್ಷಣಾರ್ಥಿಗಳ ಭವಿಷ್ಯಕ್ಕೆ ತೊಂದರೆಯಾಗುತ್ತದೆ ಎಂಬ ಅಂಶದ ಅರಿವು ಸರಕಾರಕ್ಕಿದೆಯೇ ; ಇದ್ದಲ್ಲಿ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು ;

(ಇ) ರಾಜ್ಯದಲ್ಲಿ ಎಷ್ಟು ಸರಕಾರಿ ಐ.ಟಿ.ಐ.ಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ ; ಬಾಡಿಗೆ ಕಟ್ಟಡಗಳಲ್ಲಿ ಎಷ್ಟು ಕಾರ್ಯ ನಿರ್ವಹಿಸುತ್ತವೆ (ವಿವರ ನೀಡುವುದು) ;

(ಈ) ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರಕಾರ ಐ.ಟಿ.ಐ. ಗಳ ವಾರ್ಷಿಕ ಬಾಡಿಗೆ ನಿರ್ವಹಣೆಗೆ ವೆಚ್ಚವಾಗುವ ಹಣವೆಷ್ಟು ; (ಜಿಲ್ಲಾವಾರು, ಸಂಸ್ಥೆವಾರು ವಿವರ ನೀಡುವುದು) ?

## ಎತ್ತಿನ ಹೊಳೆ ನೀರಾವರಿ ಯೋಜನೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೯೨ (೯೯೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಎತ್ತಿನ ಹೊಳೆ ನೀರಾವರಿ ಯೋಜನೆಯಲ್ಲಿ ಎಷ್ಟು ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ ; ಅವುಗಳ ಅಂದಾಜು ವೆಚ್ಚವೆಷ್ಟು ; ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿಪಡಿಸಲಾದ ಅವಧಿಯೆಷ್ಟು ; ಟೆಂಡರ್ ಪಡೆದ ಗುತ್ತಿಗೆದಾರರುಗಳು ಯಾರು (ಕಾಮಗಾರಿವಾರು ಅಂದಾಜು ಪಟ್ಟಿಯೊಂದಿಗೆ ವಿವರ ನೀಡುವುದು) ;

(ಆ) ವರಾಹಿ ನೀರಾವರಿ ಯೋಜನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಷ್ಟು ಅಭಿಯಂತರರುಗಳನ್ನು ಎತ್ತಿನ ಹೊಳೆ ಯೋಜನೆಗೆ ವರ್ಗಾಯಿಸಲಾಗಿದೆ (ವರ್ಗಾವಣೆಗೊಂಡ ಅಭಿಯಂತರರ ಹೆಸರು, ಹುದ್ದೆ ವಿಳಾಸದೊಂದಿಗೆ ವಿವರ ನೀಡುವುದು) ;

(ಇ) ಎತ್ತಿನ ಹೊಳೆ ಯೋಜನೆಯಿಂದ ಯಾವ, ಯಾವ ತಾಲ್ಲೂಕಿನ ಯಾವ ಯಾವ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸ ಲಾಗುವುದು ;

(ಈ) ಸದರಿ ಯೋಜನೆಯಿಂದ ಯಾವ, ಯಾವ ತಾಲ್ಲೂಕಿನ ಎಷ್ಟು ವಿಸ್ತೀರ್ಣ ಭೂಮಿಗೆ ನೀರಾವರಿ ಕಲ್ಪಿಸಲಾಗುವುದು ?

## ಅರಣ್ಯ ಚೆಕ್‌ಪೋಸ್ಟ್‌ಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೯೩ (೯೯೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಅರಣ್ಯ ಇಲಾಖೆಯ ಒಟ್ಟು ಚೆಕ್‌ಪೋಸ್ಟ್‌ಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಆ) ಅರಣ್ಯ ಇಲಾಖೆಯಿಂದ ಹಿಂದೆ ಇದ್ದಂತಹ ತಪಾಸಣಾ ಕೇಂದ್ರ ಗಳನ್ನು ತೆರವುಗೊಳಿಸಿರುವುದರಿಂದ ಅರಣ್ಯ ಸಂಪತ್ತು ಲೂಟಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಲ್ಲಿ, ಇದನ್ನು ನಿಯಂತ್ರಿಸಲು ಸರ್ಕಾರದ ಚಿಂತನೆ ಏನು ;

(ಇ) ಪರಿಣಾಮಕಾರಿ ಗಸ್ತಿಗಾಗಿ ಅರಣ್ಯ ಇಲಾಖೆಯ ವಾಹನಗಳಿಗೆ ಜಿ.ಪಿ.ಎಸ್. ಅಳವಡಿಸಲಾಗಿದೆಯೇ ; ಅಳವಡಿಸಿದಲ್ಲಿ ಫಲಿತಾಂಶವೇನು ?

## ತಾಂಡಾಗಳ ಅಭಿವೃದ್ಧಿ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೯೪ (೧೦೦೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಳ್ಳಾರಿ ಜಿಲ್ಲೆಯಲ್ಲಿರುವ ತಾಂಡಾಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಈ ತಾಂಡಾಗಳ ಜನರು ಎದುರಿಸುತ್ತಿರುವ ಸಮಸ್ಯೆಗಳೇನು ;

(ಇ) ಈ ತಾಂಡಾಗಳ ಅಭಿವೃದ್ಧಿಗೆ ಪ್ರಸಕ್ತ ವರ್ಷದಲ್ಲಿ ಎಷ್ಟು ಹಣ ಮೀಸಲಿರಿಸಿ, ಎಷ್ಟು ಹಣ ಬಿಡುಗಡೆಗೊಳಿಸಲಾಗಿದೆ (ತಾಂಡಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು) ;

(ಈ) ಬಿಡುಗಡೆಯಾದ ಹಣದಲ್ಲಿ ಯಾವ ಯಾವ ಕಾಮಗಾರಿ ಕೈಗೊಂಡು ಪೂರ್ಣಗೊಳಿಸಲಾಗಿದೆ ; ಬಾಕಿ ಉಳಿದಿರುವ ಕಾಮಗಾರಿಗಳೆಷ್ಟು (ಕಾಮಗಾರಿವಾರು, ತಾಂಡಾವಾರು, ತಾಲ್ಲೂಕುವಾರು, ಮೊತ್ತದ ವಿವರ ನೀಡುವುದು) ;

(ಉ) ಕಾಮಗಾರಿಗಳು ಅಪೂರ್ಣಗೊಂಡಿದ್ದಲ್ಲಿ ಕಾರಣಗಳನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುತ್ತದೆ ?

## ನೀರು ಬಾರದ ಕೊಳವೆ ಬಾವಿಗಳನ್ನು ಮುಚ್ಚದಿರುವುದು

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೯೫ (೧೦೦೪) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ನೀರಿಗಾಗಿ ಬೋರ್‌ವೆಲ್ ಕೊರೆದು ಅವುಗಳನ್ನು ಸರಿಯಾಗಿ ಮುಚ್ಚದೇ ಹಾಗೆ ಬಿಟ್ಟಿರುವ ಸ್ಥಳಗಳ ಸಂಖ್ಯೆ ಎಷ್ಟು;

(ಆ) ಈ ವಿಷಯಕ್ಕೆ ಸಂಬಂಧಪಟ್ಟಂತೆ ಸರ್ಕಾರ ಯಾರನ್ನು ಹೊಣೆಗಾರರನ್ನಾಗಿ ಮಾಡುತ್ತದೆ ;

(ಇ) ಇಂಥ ಪ್ರಕರಣಗಳಲ್ಲಿ ಎಷ್ಟು ಜನರ ಮೇಲೆ ಸರ್ಕಾರ ಕ್ರಮ ಕೈಗೊಂಡಿದೆ ;

(ಈ) ರಾಜ್ಯದಲ್ಲಿ ಈವರೆಗೆ ಕೊರೆದ ಬೋರ್‌ವೆಲ್‌ಗಳಲ್ಲಿ ಮಕ್ಕಳು ಬಿದ್ದು ತೊಂದರೆ ಅನುಭವಿಸಿದ ಮತ್ತು ಅಸುನೀಗಿದ ಎಷ್ಟು ಪ್ರಕರಣಗಳು ನಡೆದಿವೆ (ದಿನಾಂಕ, ಸ್ಥಳ ಮತ್ತು ಪರಿಹಾರ ನೀಡಿದ ವಿವರಗಳನ್ನು ನೀಡುವುದು) ;

(ಉ) ಇನ್ನು ಮುಂದೆ ರಾಜ್ಯದಲ್ಲಿ ಇಂತಹ ಘಟನೆ ಮರುಕಳಿಸದಂತೆ ಸರ್ಕಾರ ಏನೇನು ಮುಂಜಾಗ್ರತ ಕ್ರಮ ಕೈಗೊಳ್ಳಲಿದೆ (ವಿವರ ನೀಡುವುದು) ?

## ಕೊಳಚೆ ಪ್ರದೇಶಗಳ ಅಭಿವೃದ್ಧಿ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೯೬ (೧೦೦೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯಲ್ಲಿರುವ ಒಟ್ಟು (ಸ್ಲಂ) ಕೊಳಚೆ ಪ್ರದೇಶಗಳೆಷ್ಟು; ಅವು ಯಾವುವು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಈ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಪ್ರಸಕ್ತ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ಮೀಸಲಿರಿಸಿದ ಮೊತ್ತವೆಷ್ಟು; ಈವರೆಗೆ ಬಿಡುಗಡೆಗೊಳಿಸಲಾದ ಮೊತ್ತವೆಷ್ಟು ;

(ಈ) ಈ ಹಣದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ?

## ರಾಜ್ಯದ ಕೆರೆಗಳ ಮಾಹಿತಿ ಬಗ್ಗೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೯೭ (೧೦೦೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :--

(ಅ) ರಾಜ್ಯದಲ್ಲಿರುವ (ಸಣ್ಣ ನೀರಾವರಿ, ಭಾರಿ ಮತ್ತು ಮಧ್ಯಮ ನೀರಾವರಿ, ಜಿಲ್ಲಾ ಪಂಚಾಯತ್, ಗ್ರಾಮ ಪಂಚಾಯತ್‌ಗಳಿಗೆ ಸೇರಿದ) ಕೆರೆಗಳೆಷ್ಟು ಮತ್ತು ಗೋ ಕಟ್ಟೆಗಳೆಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಆ) ಇವುಗಳಲ್ಲಿ ಮಳೆ ಆಶ್ರಿತ ಕೆರೆಗಳೆಷ್ಟು ; ಜಲಾನಯನ ಪ್ರದೇಶದಲ್ಲಿ ಒಳಪಟ್ಟ ಕೆರೆಗಳೆಷ್ಟು (ಪೂರ್ಣ ಮಾಹಿತಿಯನ್ನು ತಾಲ್ಲೂಕುವಾರು ನೀಡುವುದು) ;

(ಇ) ರಾಜ್ಯದಲ್ಲಿರುವ ಕೆರೆ ಗೋ ಕಟ್ಟೆಗಳು ಒತ್ತುವರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳ ಕೆರೆಗಳಿಗೆ ಏತ ನೀರಾವರಿ ಮೂಲಕ ನೀರು ತುಂಬಿಸುವ ಕೆರೆಗಳೆಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು) ?

## ಹೊಸ ತಾಲ್ಲೂಕುಗಳ ರಚನೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೯೮ (೧೦೦೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸಬೇಕೆನ್ನುವುದು ಸರ್ಕಾರದ ಗಮನದಲ್ಲಿದೆಯೇ ;

(ಆ) ಇದ್ದರೇ ; ಯಾವಾಗ ರಚಿಸಲಾಗುವುದು ;

(ಇ) ಅವುಗಳು ಯಾವುವು (ಪೂರ್ಣ ಮಾಹಿತಿ ನೀಡುವುದು) ?

## ಕೃಷ್ಣರಾಜಸಾಗರ ಜಲಾಶಯದ ಹೂಳೆತ್ತುವುದು

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೯೯ (೧೦೨೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆ.ಆರ್.ಎಸ್. ಜಲಾಶಯದ ಹೂಳನ್ನು ಯಾವಾಗ ತೆಗೆಯಲಾಗಿತ್ತು ;

(ಆ) ಜಲಾಶಯದಲ್ಲಿ ತುಂಬಿರುವ ಹೂಳನ್ನೆತ್ತುವ ಯೋಜನೆಯು ಸರ್ಕಾರದ ಮುಂದಿದೆಯೇ ; ಹೂಳೆತ್ತಲು ಸರ್ಕಾರಕ್ಕಿರುವ ತೊಂದರೆಗಳೇನು ;

(ಇ) ಹಾಗಿದ್ದಲ್ಲಿ, ಯಾವಾಗ ಹೂಳೆತ್ತಲಾಗುವುದು (ಪೂರ್ಣ ಮಾಹಿತಿ ನೀಡುವುದು) ?

## ರೈತರ ಜಮೀನಿನ ಖಾತೆ

**ಶ್ರೀ ಬಿ. ರಾಮಕೃಷ್ಣ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೦೦ (೧೦೦೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಂದಾಯ ಜಮೀನಿನ ಖಾತೆ ಮಾಡಲು ಸಕ್ಷಮ ಅಧಿಕಾರಿ ಯಾರು ; ಅರ್ಜಿ ಸಲ್ಲಿಸಿದ ಎಷ್ಟು ದಿನದಲ್ಲಿ ಖಾತೆ ಮಾಡಲಾಗುತ್ತದೆ;

(ಆ) ರಾಜ್ಯದಲ್ಲಿ ಜಾರಿಗೆ ತಂದಿರುವ ಸಕಾಲ ಯೋಜನೆಯಡಿಯಲ್ಲಿ ಕಂದಾಯ ಜಮೀನಿನ ಖಾತೆ ಮಾಡಲು ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು ; ಆದಾಗ್ಯೂ ವಿಲೇವಾರಿಯಾಗದೆ ಉಳಿಕೆಯಾಗಿರುವ ಪ್ರಕರಣಗಳು ಎಷ್ಟು ;

(ಇ) ಈ ರೀತಿ ಪ್ರಕರಣಗಳಿಗೆ ಇಲಾಖೆಯಿಂದ ಸೂಕ್ತ ಕ್ರಮ ಕೈಗೊಳ್ಳಲಾಗಿದೆಯೇ ; ಹಾಗೂ ಈ ಯೋಜನೆಯಲ್ಲಿ ಅಧಿಕಾರಿಗಳಿಂದ ಎಷ್ಟು ದಂಡ ವಸೂಲಿ ಮಾಡಲಾಗಿದೆ ; ದಂಡ ವಸೂಲಿ ಮಾಡಿದ ಅಧಿಕಾರಿಗಳ ವಿವರವನ್ನು ಜಿಲ್ಲಾವಾರು ಮಾಹಿತಿ ನೀಡುವುದು ;

(ಈ) ನೋಂದಣಿ ಮತ್ತು ಮುದ್ರಾಂಕಗಳ ಇಲಾಖೆಯಲ್ಲಿ ಪ್ರಥಮ ದರ್ಜೆ ಸಹಾಯಕರು ಮತ್ತು ದ್ವಿತೀಯ ದರ್ಜೆ ಸಹಾಯಕರುಗಳ ರಾಜ್ಯ ವ್ಯಾಪ್ತಿ ಖಾಲಿಯಿರುವ ಹುದ್ದೆಗಳೆಷ್ಟು (ವಿವರವನ್ನು ಜಿಲ್ಲಾವಾರು ಮಾಹಿತಿ ನೀಡುವುದು) ?

## ಮೀನು ಅಭಿವೃದ್ಧಿ

**ಶ್ರೀ ಬಿ. ರಾಮಕೃಷ್ಣ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೦೧ (೧೦೪೫) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಡ್ಯ ಜಿಲ್ಲೆಯಲ್ಲಿ ಮೀನು ಉತ್ಪಾದನೆಗಾಗಿ ಅಳವಡಿಸಿ ಕೊಂಡಿರುವ ಕೆರೆಗಳೆಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು);

(ಆ) ಸರ್ಕಾರಕ್ಕೆ ಆದಾಯ ತಂದಿರುವ ಕೆರೆಗಳೆಷ್ಟು ;

(ಇ) ಜಿಲ್ಲೆಯಲ್ಲಿ ದೊಡ್ಡ ಕೆರೆಗಳೆಷ್ಟು ; ಮೀನು ಅಭಿವೃದ್ಧಿಯಲ್ಲಿ ಜಿಲ್ಲೆ ಹಿಂದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಜಿಲ್ಲೆಯಲ್ಲಿ ಹೆಚ್ಚು ಮೀನುಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಜಿಲ್ಲಾ ಕ್ರೀಡಾಂಗಣ

**ಶ್ರೀ ಸೈಯದ್ ಮುಧೀರ್ ಆಗಾ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೮೦೨ (೧೦೦೯) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಮನಗರ ಜಿಲ್ಲೆಗೆ ಜಿಲ್ಲಾ ಕ್ರೀಡಾಂಗಣ ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಕ್ರೀಡಾಂಗಣ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆಯೇ ;

(ಇ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ;

(ಈ) ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

## ಕೆರೆಗಳ ಸಮಗ್ರ ಅಭಿವೃದ್ಧಿ

**ಶ್ರೀ ಸೈಯದ್ ಮುಧೀರ್ ಆಗಾ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೮೦೩ (೧೦೦೮) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಮನಗರ ಜಿಲ್ಲೆಯಲ್ಲಿರುವ ಒಟ್ಟು ಕೆರೆಗಳು ಎಷ್ಟು ; ಇವುಗಳಲ್ಲಿ ಎಷ್ಟು ಕೆರೆಗಳು ಬತ್ತಿ ಹೋಗುತ್ತಿವೆ ;

(ಆ) ಕೆರೆಗಳ ಸಮಗ್ರ ಅಭಿವೃದ್ಧಿಗಾಗಿ ತೆಗೆದುಕೊಂಡ ಕ್ರಮಗಳೇನು ; ಕೆರೆಗಳ ಅಭಿವೃದ್ಧಿ, ನಾಲಾ/ಚೆಕ್ ಡ್ಯಾಂಗಳ ಅಭಿವೃದ್ಧಿಗಾಗಿ ಒದಗಿಸಲಾದ ಅನುದಾನ ಎಷ್ಟು ; ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ; ಪ್ರತಿ ಕಾಮಗಾರಿಯ ವಿವರ ಮತ್ತು ಈ ಕಾಮಗಾರಿಗಳಿಗಾಗಿ ಎಷ್ಟು ಹಣವನ್ನು ವಿನಿಯೋಗಿಸಲಾಗಿದೆ (ಕ್ಷೇತ್ರವಾರು ಸಂಪೂರ್ಣ ವಿವರ ನೀಡುವುದು) ?

## ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ನೀರಾವರಿ ಯೋಜನೆಗಳು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೮೦೪ (೧೦೧೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಹೈದ್ರಾಬಾದ್ ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ವಿವಿಧ ನೀರಾವರಿ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರತಿ ವರ್ಷ ವೆಚ್ಚ ಮಾಡಿರುವ ಹಣವೆಷ್ಟು ; ಈ ಹಣದಿಂದ ಯಾವ ಕಾಮಗಾರಿ ಗಳನ್ನು ಕೈಗೊಳ್ಳಲಾಗಿದೆ (ಯೋಜನೆವಾರು, ತಾಲ್ಲೂಕುವಾರು, ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು) ;

(ಆ) ಈ ಪೈಕಿ ಎಷ್ಟು ಯೋಜನೆಗಳು ಪೂರ್ಣಗೊಂಡಿವೆ ಮತ್ತು ಇನ್ನೂ ಎಷ್ಟು ಯೋಜನೆಗಳು ಅಪೂರ್ಣವಾಗಿವೆ ; ಅಪೂರ್ಣವಾಗಿರುವ ಯೋಜನೆಗಳನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಕಂದಾಯ ಇಲಾಖೆಯಲ್ಲಿ ಲೋಕಾಯುಕ್ತ ದಾಳಿಗೊಳಗಾದವರು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೮೦೫ (೧೦೧೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕಂದಾಯ ಇಲಾಖೆಯಲ್ಲಿ ತಹಶೀಲ್ದಾರ್, ವಿಶೇಷ ತಹಶೀಲ್ದಾರ್‌ಗಳಲ್ಲಿ ಎಷ್ಟು ಅಧಿಕಾರಿಗಳು ಲೋಕಾಯುಕ್ತ ದಾಳಿ/ಟ್ರ್ಯಾಪ್‌ಗೆ ಒಳಗಾಗಿರುತ್ತಾರೆ (ಅವರ ಹೆಸರುಗಳೊಂದಿಗೆ ಸಂಪೂರ್ಣ ಮಾಹಿತಿ ಒದಗಿಸುವುದು) ;

(ಆ) ಬೆಂಗಳೂರು ನಗರ ಜಿಲ್ಲೆ, ಗ್ರಾಮಾಂತರ ಜಿಲ್ಲೆಯ ವಿಶೇಷ ತಹಶೀಲ್ದಾರರುಗಳು ಲೋಕಾಯುಕ್ತ ದಾಳಿಗೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅವರುಗಳ ವಿರುದ್ಧ ಯಾವ ತನಿಖೆಗೆ ಒಳಪಡಿಸಲಾಗಿದೆ ಹಾಗೂ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಇ) ಲೋಕಾಯುಕ್ತ ಟ್ರ್ಯಾಪ್ ಪ್ರಕರಣದಲ್ಲಿ ಸೇವೆಯಿಂದ ಅಮಾನತ್ತುಗೊಂಡ ಅಧಿಕಾರಿಗಳನ್ನು ಅವರ ಮೇಲಿನ ಆಪಾದನೆಗಳಿಂದ ಮುಕ್ತಗೊಳಿಸುವ ಮೊದಲೇ ಪುನಃ ತಾಲ್ಲೂಕು ದಂಡಾಧಿಕಾರಿ ಹುದ್ದೆಗೆ ನೇಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಅವರ ಪದನಾಮ, ಹೆಸರುಗಳೊಂದಿಗೆ ಸಂಪೂರ್ಣ ಮಾಹಿತಿಯ ವಿವರ ನೀಡುವುದು ;

(ಈ) ಅಂತಹ ಅಧಿಕಾರಿಗಳನ್ನು ಅವರ ಮೇಲಿನ ಆರೋಪ ಮುಕ್ತಗೊಳ್ಳುವವರೆಗೂ ತಾಲ್ಲೂಕು ದಂಡಾಧಿಕಾರಿ ಹುದ್ದೆಗೆ ನೇಮಿಸದಂತೆ ಸರ್ಕಾರ ಕ್ರಮ ಕೈಗೊಳ್ಳುವುದೇ (ಮಾಹಿತಿ ನೀಡುವುದು) ?

## ಗ್ರಾಮ ಭಾಗ್ಯ ಯೋಜನೆ

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೮೦೬ (೫೨೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಂದಾಯ ಗ್ರಾಮಗಳಲ್ಲದ ತಾಂಡಾ, ಕಾಲೋನಿ, ಕ್ಯಾಂಪ್‌ಗಳು, ಬೋವಿಹಟ್ಟಿ, ಗೊಲ್ಲರಹಟ್ಟಿಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಿ ಗ್ರಾಮ ಭಾಗ್ಯ ಕಲ್ಪಿಸುವ ಯೋಜನೆ ಯಾವ ಹಂತದಲ್ಲಿದೆ (ಇಂತಹ ತಾಂಡಾ, ಹಟ್ಟಿಗಳ ಸಂಖ್ಯೆಗಳ ವಿವರಗಳನ್ನು ಜಿಲ್ಲಾವಾರು ನೀಡುವುದು) ;

(ಆ) ಇವುಗಳ ಪುನರುಜ್ಜೀವನ ಕಾಯಕಲ್ಪಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಇದರಿಂದ ಸರ್ಕಾರದ ಬೊಕ್ಕಸಕ್ಕೆ ಬರುವ ನಷ್ಟ ಎಷ್ಟು ;

(ಇ) ಈಗಾಗಲೇ ಆದೇಶ ಹೊರಡಿಸಲ್ಪಟ್ಟಿದ್ದರೂ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಸದರಿ ತಾಂಡಾ ಹಟ್ಟಿಗಳಿಗೆ ಕಂದಾಯ ಗ್ರಾಮದ ಸ್ಥಾನಮಾನ ಲಭಿಸದಿರುವ ಕಾರಣಗಳೇನು ; ಇದಕ್ಕೆ ಕಾರಣರ್‍ಯಾರು; ಇವರ ಮೇಲೆ ಯಾವ ಕ್ರಮ ಜರುಗಿಸಲಾಗುವುದು ;

(ಈ) ಇವುಗಳನ್ನು ಹಂತ ಹಂತವಾಗಿ ಪರಿವರ್ತಿಸಲು ಸರ್ಕಾರ ಯಾವ ಯೋಜನೆ ಹಮ್ಮಿಕೊಂಡಿದೆ ; ಇದನ್ನು ಯಾವಾಗ ಅನುಷ್ಠಾನ ಗೊಳಿಸಲಾಗುತ್ತದೆ (ಕಾಲಮಿತಿಯೊಳಗೆ ಹಮ್ಮಿಕೊಳ್ಳುವ ಯೋಜನೆಯ ವಿವರಗಳನ್ನು ಒದಗಿಸುವುದು) ;

(ಉ) ಈ ನಿಟ್ಟಿನಲ್ಲಿ ಕಳೆದ ಒಂದು ವರ್ಷದಿಂದ ಲಂಬಾಣಿ ತಾಂಡಾ (ಬಂಜಾರ) ಅಭಿವೃದ್ಧಿ ಮಂಡಳಿಯ ಪಾತ್ರವೇನು (ತಿಳಿಸುವುದು) ?

## ಜಲಾಶಯಗಳು ಹಾಗೂ ಮೀನಿನ ಅಭಿವೃದ್ಧಿ

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೮೦೭ (೧೦೨೮) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಜಲಾಶಯಗಳು ಮತ್ತು ಮೀನಿನ ಉತ್ಪನ್ನದ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ ; ಇದ್ದಲ್ಲಿ, ರಾಜ್ಯದಲ್ಲಿರುವ ಒಟ್ಟು ಜಲಾಶಯಗಳೆಷ್ಟು ; ಅವುಗಳಲ್ಲಿ ಕಳೆದ ೫ ವರ್ಷಗಳಿಂದ ಆಗುತ್ತಿರುವ ವರ್ಷವಾರು ಮೀನಿನ ಉತ್ಪನ್ನ ಎಷ್ಟು (ಮಾಹಿತಿ ನೀಡುವುದು) ;

(ಆ) ಜಲಾಶಯಗಳಲ್ಲಿ ಮೀನಿನ ಉತ್ಪನ್ನ ಹೆಚ್ಚಿಸಲು ಸರ್ಕಾರ ಹೊಸದಾಗಿ ವೈಜ್ಞಾನಿಕ ಕ್ರಮಗಳನ್ನೇನಾದರೂ ಕೈಗೊಂಡಿದೆಯೇ ; ಇದ್ದಲ್ಲಿ, ಯಾವ ಕ್ರಮಗಳನ್ನು ಕೈಗೊಂಡಿದೆ (ಜಿಲ್ಲಾವಾರು ವಿವರ ನೀಡುವುದು) ; ಹೊಸ ತಳಿಯ ಮೀನುಗಳನ್ನು ಗುರುತಿಸಲಾಗಿದೆಯೇ (ವಿವರ ನೀಡುವುದು) ;

(ಇ) ಇದಕ್ಕಾಗಿ ಖರ್ಚು ಮಾಡುತ್ತಿರುವ ಹಣವೆಷ್ಟು ; ಮತ್ತು ವೈಜ್ಞಾನಿಕ ಕ್ರಮದಿಂದಾಗಿ ಮೀನಿನ ಉತ್ಪನ್ನವೆಷ್ಟು ; ಆರ್ಥಿಕ ಲಾಭವೆಷ್ಟು ; ಎಷ್ಟು ಜಲಾಶಯಗಳಲ್ಲಿ ವೈಜ್ಞಾನಿಕ ಕ್ರಮಗಳನ್ನು ಅನುಸರಿಸಲಾಗುತ್ತಿದೆ (ಪ್ರತಿಯೊಂದರ ಜಿಲ್ಲಾವಾರು ವಿವರ ನೀಡುವುದು) ;

(ಈ) ಈ ಯೋಜನೆಯಿಂದ ರಾಜ್ಯದ ಎಷ್ಟು ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿದೆ (ಜಿಲ್ಲಾವಾರು ವಿವರ ನೀಡುವುದು) ?

## ಯುವ ಸಬಲೀಕರಣ ಮತ್ತು ಕ್ರೀಡೆಗೆ ಸರ್ಕಾರದ ಕೊಡುಗೆ

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೮೦೮ (೧೦೧೪) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ರಾಜ್ಯದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡೆಗಾಗಿ ಯಾವುದಾದರೂ ಹೊಸ ನೀತಿ ಆರಂಭಿಸಿದೆಯೇ (ವಿವರ ನೀಡುವುದು) ;

(ಆ) ರಾಜ್ಯ ಸರ್ಕಾರವು ಕ್ರೀಡಾ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ಅನುದಾನವೆಷ್ಟು ; ಅದರಲ್ಲಿ ವಿಕಲಚೇತನ ಕ್ರೀಡಾಪಟುಗಳಿಗೆ ಹಾಗೂ ಮಹಿಳಾ ಕ್ರೀಡಾ ಪಟುಗಳಿಗೆ ಮೀಸಲಿರುವುದೆಷ್ಟು ; ಕಳೆದ ಒಂದು ವರ್ಷದಲ್ಲಿ ಯಾವ್ಯಾವ ಕ್ರೀಡೆಗೆ ಎಷ್ಟು ಖರ್ಚು ಮಾಡಲಾಗಿದೆ ;

(ಇ) ಎಷ್ಟು ಕ್ರೀಡಾಪಟುಗಳಿಗೆ ಸಹಾಯಧನ ನೀಡಲಾಗಿದೆ ; ಎಷ್ಟು ಜನ ಸಹಾಯಧನಕ್ಕಾಗಿ ಮನವಿ ಸಲ್ಲಿಸಿದ್ದಾರೆ (ವಿವರ ನೀಡುವುದು);

(ಈ) ಕ್ರೀಡೆಯ ಅಭಿವೃದ್ಧಿಯ ದೃಷ್ಟಿಯಿಂದ ರಾಜ್ಯದಲ್ಲಿ ಎಷ್ಟು ಕ್ರೀಡಾಂಗಣಗಳನ್ನು ಅಭಿವೃದ್ಧಿಪಡಿಸಲಾಗಿದೆ (ಜಿಲ್ಲಾವಾರು ವಿವರ ನೀಡುವುದು) ;

(ಉ) ರಾಜ್ಯದ ಎಷ್ಟು ಕ್ರೀಡಾಪಟುಗಳು ಹಾಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿ ರಾಜ್ಯಕ್ಕೆ ಗೌರವ ತಂದಿದ್ದಾರೆ (ವಿವರ ಸಲ್ಲಿಸುವುದು) ?

## ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳು

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೮೧೯ (೧೦೧೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಎಷ್ಟು ಜಿಲ್ಲೆಗಳಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳು ಯಾವ ಯಾವ ಹಂತದಲ್ಲಿ ಚಾಲ್ತಿಯಲ್ಲಿವೆ ;

(ಆ) ಈ ಯೋಜನೆಗಳಿಗೆ ರಾಜ್ಯ ಸರ್ಕಾರದಿಂದ ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು ; ಸದರಿ ಅನುದಾನದಲ್ಲಿ ಎಷ್ಟು ಬಳಕೆಯಾಗಿದೆ ; ಬಾಕಿಯಿರುವ ಮೊತ್ತವೆಷ್ಟು ಹಾಗೂ ಯಾವ-ಯಾವ ಕಂಪನಿಗಳಿಂದ ಕೆಲಸ ಮಾಡಿಸಲಾಗುತ್ತಿದೆ (ಜಿಲ್ಲಾವಾರು ವಿವರ ನೀಡುವುದು) ;

(ಇ) ಕಳೆದ ಒಂದು ವರ್ಷದ ಅವಧಿಯಲ್ಲಿ ಎಷ್ಟು ಕೆರೆ, ಕಾಲುವೆ, ಕಟ್ಟೆ (ಕೊಳವೆ ಬಾವಿಗಳು) ಗಳ ಮೂಲಕ ರೈತರಿಗೆ ನೀರನ್ನು ಒದಗಿಸಲಾಗಿದೆ ; ಇದರಿಂದ ಬೆಳೆಯಲ್ಲಿ ಅಭಿವೃದ್ಧಿ ಕಂಡಿದೆಯೇ; ಎಷ್ಟು ಅಭಿವೃದ್ಧಿ ಹೊಂದಿದೆ ;

(ಈ) ಎಷ್ಟು ಹೊಸ ಯೋಜನೆಗಳನ್ನು ರೂಪಿಸಲಾಗಿದೆ ; ಕೇಂದ್ರ ಸರ್ಕಾರಕ್ಕೆ ಅನುದಾನದ ಪ್ರಸ್ತಾಪ ನೀಡಲಾಗಿದೆಯೇ (ವಿವರ ನೀಡುವುದು) ?

## ಕೆರೆಗಳ ಅಭಿವೃದ್ಧಿಗಾಗಿ ವಿನಿಯೋಗಿಸಿದ ಅನುದಾನ

**ಶ್ರೀ ಎಂ. ಶ್ರೀನಿವಾಸ್ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೮೧೦ (೧೦೧೭) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಣ್ಣ ನೀರಾವರಿ ಇಲಾಖೆಯಡಿ ರಾಜ್ಯದಲ್ಲಿ ಗುರುತಿಸಲಾಗಿರುವ ಕೆರೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ಒದಗಿಸುವುದು) ;

(ಆ) ಕಳೆದ ೩ ವರ್ಷಗಳ ಅವಧಿಯಲ್ಲಿ ಕೆರೆಗಳ ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರವು ವಿನಿಯೋಗಿಸಿದ ಹಣವೆಷ್ಟು ; ಯಾವ ಕೆರೆಗಳನ್ನು ಈ ಅನುದಾನಗಳಿಂದ ಅಭಿವೃದ್ಧಿಗೊಳಿಸಲಾಗಿದೆ (ಪ್ರತ್ಯೇಕ ಮಾಹಿತಿ ಒದಗಿಸುವುದು) ;

(ಇ) ಕೆರೆಗಳ ಅಭಿವೃದ್ಧಿ, ಹೂಳೆತ್ತುವ ಮತ್ತು ಸಂರಕ್ಷಣೆಯ ನಿಟ್ಟಿನಲ್ಲಿ ಒಂದು ಸಮಗ್ರ ಯೋಜನೆಯು ತುರ್ತು ಅಗತ್ಯವೆಂದು ಸರ್ಕಾರವು ಯೋಚಿಸಿದೆಯೇ (ಹಾಗಿದ್ದಲ್ಲಿ, ಈ ಕುರಿತ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು) ?

## ತೆರೆದ ಕೊಳವೆ ಬಾವಿಯಿಂದ ಸಂಭವಿಸುತ್ತಿರುವ ಅನಾಹುತಗಳು

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೧೧ (೧೦೧೯) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಖಾಸಗಿ ಹಾಗೂ ಸರ್ಕಾರಿ ಭೂಮಿಗಳಲ್ಲಿ ಹಾಕಿದ ತೆರೆದ ಕೊಳವೆ ಬಾವಿಗಳಲ್ಲಿ ಇತ್ತೀಚೆಗೆ ಚಿಕ್ಕ ಮಕ್ಕಳು ಬೀಳುವ ಪ್ರಕರಣಗಳು ಹೆಚ್ಚಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ ಅಂತಹ ಎಷ್ಟು ಘಟನೆಗಳು ಸಂಭವಿಸಿವೆ ; ಅವುಗಳು ಪುನಃ ಸಂಭವಿಸದಂತೆ ಸರ್ಕಾರ ಯಾವ ಮುಂಜಾಗ್ರತೆ ಕ್ರಮ ಕೈಗೊಳ್ಳುವುದು ?

## ಕೃಷ್ಣಾ ನದಿಯ ಬ್ರಿಡ್ಜ್ ಕಂ ಬ್ಯಾರೇಜ್ ಮೂಲಕ ನೀರು ಪೋಲು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೮೧೨ (೧೦೩೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಕೃಷ್ಣಾ ನದಿಗೆ ಕಲ್ಲೋಳ ಹತ್ತಿರ ಇರುವ ಬ್ರಿಡ್ಜ್ ಕಂ ಬ್ಯಾರೇಜ್ ಶಿಥಿಲಗೊಂಡು ರಸ್ತೆ ಸಂಚಾರ ಸ್ಥಗಿತಗೊಂಡಿದ್ದು ಮತ್ತು ನೀರು ಪೋಲಾಗಿ ನದಿಗೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸದರಿ ಸ್ಥಳದಲ್ಲಿಯೇ ಹೊಸ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ;

(ಇ) ಇದಕ್ಕೆ ತಗಲುವ ಅಂದಾಜು ಮೊತ್ತವೆಷ್ಟು ;

(ಈ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

## ಧೂದ್ ಗಂಗಾ–ವೇದಗಂಗಾ ಮತ್ತು ಕೃಷ್ಣಾ ನದಿಗಳ ಬ್ಯಾರೇಜ್‌ಗಳು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೮೧೩ (೧೦೩೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :--

(ಅ) ಬೆಳಗಾವಿ ಜಿಲ್ಲೆಯ ಧೂದ್ ಗಂಗಾ–ವೇದಗಂಗಾ ಮತ್ತು ಕೃಷ್ಣಾ ನದಿಗಳಿಗೆ ಇರುವ ಬ್ಯಾರೇಜ್‌ಗಳು ಶಿಥಿಲಾವಸ್ಥೆಗೆ ತಲುಪಿದ್ದು, ಇದರಿಂದ ಬ್ಯಾರೇಜ್‌ಗಳಲ್ಲಿ ನೀರು ನಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಬ್ಯಾರೇಜ್‌ಗಳ ದುರಸ್ತಿಗೆ ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು (ವಿವರ ಒದಗಿಸುವುದು) ;

(ಇ) ಈಗಾಗಲೇ ಯಾವ ಯಾವ ಬ್ಯಾರೇಜ್‌ಗಳನ್ನು ದುರಸ್ತಿಗೊಳಿಸ ಲಾಗಿದೆ (ವಿವರಗಳನ್ನು ನೀಡುವುದು) ;

(ಈ) ಬ್ಯಾರೇಜ್ ದುರಸ್ತಿಗೆ ವೆಚ್ಚ ಮಾಡಿದ ಮೊತ್ತವೆಷ್ಟು (ಪ್ರತ್ಯೇಕವಾಗಿ ವಿವರ ನೀಡುವುದು) ;

(ಉ) ಯಾವ ಕಾಲಮಿತಿಯಲ್ಲಿ ಈ ದುರಸ್ತಿ ಕಾಮಗಾರಿಗಳನ್ನು ಪೂರ್ತಿಗೊಳಿಸಲಾಗುವುದು ?

## ಹಿಪ್ಪರಗಿ ಬ್ಯಾರೇಜ್‌ನಲ್ಲಿ ನೀರು ಖಾಲಿಯಾಗಿ ಕುಡಿಯುವ ನೀರಿಗೆ ತೊಂದರೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೮೧೪ (೧೦೩೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಿಪ್ಪರಗಿ ಬ್ಯಾರೇಜ್‌ನಲ್ಲಿ ನೀರು ಬೇಸಿಗೆಯಲ್ಲಿ ಸಂಪೂರ್ಣವಾಗಿ ಖಾಲಿಯಾಗಿ ಏಪ್ರಿಲ್, ಮೇ ತಿಂಗಳಿನಲ್ಲಿ ನೀರಿನ ಅಭಾವದಿಂದಾಗಿ ರೈತರಿಗೆ ಮತ್ತು ಸಾರ್ವಜನಿಕರಿಗೆ ಕುಡಿಯುವ ನೀರಿನ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಯಾವುದೇ ಒಂದು ಅಣೆಕಟ್ಟಿನ ಬ್ಯಾರೇಜ್‌ಗಳಲ್ಲಿ ಕನಿಷ್ಠ ನೀರನ್ನು ಕಾಯ್ದುಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಹಿಪ್ಪರಗಿ ಬ್ಯಾರೇಜ್‌ನಲ್ಲಿ ಹೆಚ್ಚಿಗೆ ನೀರನ್ನು ಸಂಗ್ರಹಿಸಲು ಬ್ಯಾರೇಜ್ ಗೇಟ್ ಎತ್ತರಿಸುವ ಯೋಜನೆ ಸರ್ಕಾರದ ಮುಂದಿದೆಯೇ ?

## ಒತ್ತುವರಿಯಾದ ಸರ್ಕಾರಿ ಜಾಗ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೮೧೫ (೧೦೨೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ ಜಿಲ್ಲೆಯಲ್ಲಿ ಸರ್ಕಾರಿ ಗೋಮಾಳ, ಕೆರೆ, ಕಟ್ಟೆ, ಖುಲ್ಲಾ ಜಾಗ ಸೇರಿದಂತೆ ೨೫೦೦ ಎಕರೆ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದು ನಿಜವೇ ; ಹಾಗಿದ್ದಲ್ಲಿ, ಯಾರು ಯಾರು ಎಷ್ಟೆಷ್ಟು ಜಾಗವನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ ;

(ಆ) ಒತ್ತುವರಿ ಮಾಡಿದ್ದನ್ನು ತೆರವುಗೊಳಿಸಲು ಸರ್ಕಾರ ಇಲ್ಲಿಯವರೆಗೆ ಕ್ರಮ ಕೈಗೊಳ್ಳದಿರಲು ಕಾರಣವೇನು ;

(ಇ) ತಕ್ಷಣ ಸದರಿ ಜಾಗವನ್ನು ಅಕ್ರಮ ಮಾಡಿಕೊಂಡಿದ್ದನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ಒದಗಿಸಲು ಕ್ರಮ ಕೈಗೊಳ್ಳುವುದೇ ?

## ವಾಹನಗಳ ಅಪಘಾತದಿಂದ ಸಾವಿಗೀಡಾಗುತ್ತಿರುವ ವನ್ಯ ಮೃಗಗಳು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೧೬ (೧೦೨೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಯಾವ ಅರಣ್ಯ ಪ್ರದೇಶಗಳಲ್ಲಿ ಹಾದು ಹೋಗುವ ರಸ್ತೆಗಳನ್ನು ಅಪಘಾತ ವಲಯಗಳೆಂದು ಗುರುತಿಸಲಾಗಿದೆ ;

(ಆ) ರಾಜ್ಯದ ಯಾವ ಅರಣ್ಯ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವನ್ಯ ಜೀವಿಗಳು ರಸ್ತೆ ಅಪಘಾತದಲ್ಲಿ ಮೃತಪಡುತ್ತವೆ ;

(ಇ) ರಾಷ್ಟ್ರೀಯ ಉದ್ಯಾನವನ, ವನ್ಯಧಾಮ, ಮೀಸಲು ಅರಣ್ಯ ಪ್ರದೇಶ, ರಕ್ಷಿತಾರಣ್ಯ ಪ್ರದೇಶಗಳಲ್ಲಿ ಹಾದು ಹೋಗುವ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕಳೆದ ಐದು ವರ್ಷಗಳಿಂದ ವಾಹನ ಅಪಘಾತಗಳಲ್ಲಿ ಮೃತಪಟ್ಟ ವನ್ಯ ಪ್ರಾಣಿಗಳೆಷ್ಟು ;

(ಈ) ಅರಣ್ಯಗಳಲ್ಲಿ ಹಾದು ಹೋಗುವ ಪ್ರಮುಖ ರಸ್ತೆಗಳಲ್ಲಿ ಪ್ರಾಣಿಗಳು ರಸ್ತೆ ದಾಟಲು ವಿದೇಶದಲ್ಲಿರುವಂತೆ ಅಂಡರ್‌ಪಾಸ್, ಓವರ್‌ಪಾಸ್ ನಿರ್ಮಿಸಿ ತಂತಿ ಬೇಲಿ ನಿರ್ಮಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ;

(ಉ) ವನ್ಯ ಪ್ರಾಣಿಗಳು ಮತ್ತು ವಾಹನಗಳ ನಡುವೆ ನಡೆಯುವ ಅಪಘಾತ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯ ಜಮೀನಿನ ಅರಣ್ಯೀಕರಣ

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ) :-**

೮೧೭ (೧೦೪೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಗೆ ಸೇರಿದ ಯಾವ ಯಾವ ಜಮೀನಿನಲ್ಲಿ ಎಷ್ಟು ಪ್ರಮಾಣ ಅರಣ್ಯೀಕರಣಗೊಳಿಸಲಾಗಿದೆ ಮತ್ತು ಅರಣ್ಯೀಕರಣಗೊಳಿಸಲಾಗುವುದು ; ಇದಕ್ಕಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ (ಸಂಪೂರ್ಣ ವಿವರ ನೀಡುವುದು) ?

## ಹಿಡಕಲ್ ಅಣೆಕಟ್ಟು ಮುಂಬದಿಯಲ್ಲಿ ಬೃಂದಾವನ ಗಾರ್ಡನ್ ನಿರ್ಮಾಣ

**ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ) :-**

೮೧೮ (೯೨೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಿನಾಂಕ: ೧೪-೦೭-೧೯೮೭ರಂದು ಮಾನ್ಯ ಲೋಕೋಪಯೋಗಿ ಸಚಿವರ ಮತ್ತು ಕಾಡಾ ಅಧಿಕಾರಿಗಳ ಸಮಕ್ಷಮದಲ್ಲಿ ಜರುಗಿದ ಸಭೆಯಲ್ಲಿ ಹಿಡಕಲ್ ಅಣೆಕಟ್ಟು ಕೆಳಭಾಗದಲ್ಲಿ ಬೃಂದಾವನ ಮಾದರಿಯ ಉದ್ಯಾನವನ್ನು ನಿರ್ಮಿಸಲು ನಿರ್ಣಯಿಸಿದ ಸಂಗತಿ ನಿಜವೇ ;

(ಆ) ಈ ಯೋಜನೆಯ ನೀಲಿ ನಕ್ಷೆ ಯಾರಿಂದ ಮತ್ತು ಎಂದು ತಯಾರಿಸಲಾಯಿತು ; ಈ ಕೆಲಸಕ್ಕೆ ಎಷ್ಟು ವೆಚ್ಚ ತಗಲುವುದು (ಸಂಪೂರ್ಣ ವಿವರ ಒದಗಿಸುವುದು) ;

(ಇ) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ, ಇವರು ಆರ್ಕಿಟೆಕ್ಟ್‌ರವರಿಂದ ಟೆಂಡರ್ ಯಾವತ್ತು ಕರೆದರು (ವಿವರ ಒದಗಿಸುವುದು) ;

(ಈ) ಕಾವೇರಿ ನೀರಾವರಿ ನಿಗಮದ ಅಣೆಕಟ್ಟುಗಳ ಪ್ರದೇಶದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಿದಂತೆ ಇಲ್ಲಿಯೂ ಅಭಿವೃದ್ಧಿ ಪಡಿಸಲಾಗುವುದೇ ;

(ಉ) ದಿನಾಂಕ: ೨೨-೧-೨೦೦೯ರಲ್ಲಿ ಬೆಳಗಾವಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕೆಲಸಕ್ಕೆ ೫.೫೦ ಕೋಟಿ ಹಣ ಬಿಡುಗಡೆ ಆದ ಸಂಗತಿ ನಿಜವೇ ; ಅನುದಾನ ಬಿಡುಗಡೆ ಆದರೂ ಇನ್ನೂವರೆಗೂ ಈ ಕೆಲಸ ಏಕೆ ಪ್ರಾರಂಭವಾಗಿರುವುದಿಲ್ಲ ; ಇನ್ನೂ ಎಷ್ಟು ದಿನಗಳಲ್ಲಿ ಕೆಲಸ ಪ್ರಾರಂಭಿಸಲಾಗುವುದು ;

(ಊ) ವ್ಯವಸ್ಥಾಪಕ ನಿರ್ದೇಶಕರು ೨೦೧೩ರಲ್ಲಿ ತಾಂತ್ರಿಕ ಉಪ ಸಮಿತಿಯವರು, ಈ ಕೆಲಸಕ್ಕೆ ಅನುಮೋದನೆ ನೀಡಿ, ಮುಖ್ಯ ಇಂಜಿನೀಯರ ನೀರಾವರಿ ಉತ್ತರ ವಲಯ ಬೆಳಗಾವಿ ಇವರಿಗೆ ಈ ಕೆಲಸಕ್ಕೆ ೫ ಕೋಟಿ ಅನುದಾನ ಅನುಮೋದನೆ ನೀಡಿ ಮಂಜೂರಾತಿ ನೀಡಿದ ಸಂಗತಿ ನಿಜವೇ ; ಹಾಗಿದ್ದಲ್ಲಿ, ಕೂಡಲೇ ಈ ಕೆಲಸವನ್ನು ಪ್ರಾರಂಭಿಸಲಾಗುವುದೇ ; ಹಾಗೂ ಇನ್ನೂವರೆಗೂ ಏಕೆ ಪ್ರಾರಂಭಿಸಿರುವುದಿಲ್ಲ ;

(ಋ) ನೀರಾವರಿ ಇಲಾಖೆಗೆ ಸೇರಿದ ಧೂಪದಾಳ ಪ್ರವಾಸಿ ಮಂದಿರ ಸುಣ್ಣ–ಬಣ್ಣವಿಲ್ಲದೆ ಸೋರುತ್ತಿರುವ ಕಟ್ಟಡವನ್ನು ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೆ ;

(ೠ) ಸರ್ಕಾರದವರು ಈ ಕೆಲಸವನ್ನು ಯಾವ ಪ್ರಕಾರವಾಗಿ ಕೈಗೊಳ್ಳಬೇಕು ಎಂದು ನಿರ್ಣಯಿಸಿರುವರು ಹಾಗೂ ಇನ್ನೂ ಎಷ್ಟು ದಿನಗಳೊಳಗಾಗಿ ಕೈಕೊಳ್ಳಲಾಗುವುದು (ವಿವರ ಒದಗಿಸುವುದು) ?

## ಶಾಶ್ವತ ನೀರಾವರಿ ಯೋಜನೆಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೬೧೯ (೧೦೩೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ–ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿರುವ ಕೆರೆಗಳನ್ನು ತುಂಬಿಸಲು ಹಾಗೂ ಕೃಷಿ ಚಟುವಟಿಕೆಗಳಿಗೆ ನೀರುಣಿಸಲು ಸರ್ಕಾರ ರೂಪಿಸಿರುವ ಶಾಶ್ವತ ನೀರಾವರಿ ಯೋಜನೆಗಳಾವುವು ;

(ಆ) ಈ ಯೋಜನೆಗಳ ವಿವರಗಳನ್ನು ಸವಿಸ್ತಾರವಾಗಿ ನೀಡುವುದು ;

(ಇ) ಈ ಯೋಜನೆಗಳ ಅನುಷ್ಠಾನಕ್ಕಾಗಿ ತಗಲುವ ಅಂದಾಜು ವೆಚ್ಚ ಹಾಗೂ ಪೂರ್ಣಗೊಳಿಸಲು ಬೇಕಾಗುವ ಅವಧಿ ಎಷ್ಟು ?

## ಸಣ್ಣ ನೀರಾವರಿ ಕೆರೆಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೮೨೦ (೧೦೪೦) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿರುವ ಸಣ್ಣ ನೀರಾವರಿ ಕೆರೆಗಳೆಷ್ಟು ; ಅವುಗಳ ವ್ಯಾಪ್ತಿ, ವಿಸ್ತೀರ್ಣ ಮತ್ತು ಶೇಖರಣಾ ಸಾಮರ್ಥ್ಯದ ವಿವರಗಳನ್ನು ನೀಡುವುದು ;

(ಆ) ಕಳೆದ ೫ ವರ್ಷಗಳಿಂದ ಈ ಕೆರೆಗಳ ಅಭಿವೃದ್ಧಿಗೆ ನೀಡಿರುವ ಅನುದಾನವೆಷ್ಟು ;

(ಇ) ಈ ಅನುದಾನ ಬಳಕೆಯಿಂದ ಆಗಿರುವ ಕೆರೆಗಳ ಅಭಿವೃದ್ಧಿಯ ವಿವರಗಳನ್ನು ಕೆರೆವಾರು ನೀಡುವುದು ;

(ಈ) ಈ ಅವಧಿಯಲ್ಲಿ ಆಗಿರುವ ಅಭಿವೃದ್ಧಿಯ ಶೇಕಡಾವಾರು ಪ್ರಮಾಣ ತಿಳಿಸುವುದು ;

(ಉ) ಈ ಕೆರೆಗಳ ಸಮಗ್ರ ಅಭಿವೃದ್ಧಿಗೆ "ಕೆರೆಗಳ ನಿರ್ವಹಣಾ ಪ್ರಾಧಿಕಾರಿ" ರಚನೆ ಮಾಡುವ ಯೋಚನೆ ಸರ್ಕಾರಕ್ಕಿದೆಯೇ ?

## ಕರ್ನಾಟಕ ಅರಣ್ಯ ಕಾಯ್ದೆ ಅಡಿ ದಾಖಲಾಗಿರುವ ಪ್ರಕರಣಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೮೨೧ (೧೦೩೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳ ಅವಧಿಯಲ್ಲಿ ಕರ್ನಾಟಕ ಅರಣ್ಯ ಕಾಯ್ದೆ ಅಡಿಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣಗಳು ಎಷ್ಟು (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಆ) ಖುಲಾಸೆಯಾದ ಪ್ರಕರಣಗಳೆಷ್ಟು ; ಶಿಕ್ಷೆಯಾದ ಪ್ರಕರಣಗಳೆಷ್ಟು?

## ಅರಣ್ಯ ಪ್ರದೇಶದ ವಿಸ್ತೀರ್ಣ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೮೨೨ (೧೦೩೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು ; ಪ್ರಾದೇಶಿಕ ಅರಣ್ಯ ಹಾಗೂ ಸಾಮಾಜಿಕ ಅರಣ್ಯಗಳ ವಲಯವಾರು ಮಾಹಿತಿ ನೀಡುವುದು ;

(ಆ) ಒಟ್ಟಾರೆ ಅರಣ್ಯ ಸಂಪತ್ತನ್ನು ಅಂದಾಜಿಸಲಾಗಿದೆಯೇ ; ಅಂದಾಜಿಸಿದ್ದಲ್ಲಿ, ವಿವರಗಳನ್ನು ವಲಯವಾರು ನೀಡುವುದು ;

(ಇ) ರಾಜ್ಯದಲ್ಲಿ ಸಿಗುವ ಅತೀ ಹೆಚ್ಚು ಬೆಲೆ ಬಾಳುವ ಮರ ಯಾವುದು ;

(ಈ) ಅಂತಹ ಬೆಲೆ ಬಾಳುವ ಮರಗಳು ರಾಜ್ಯದಲ್ಲಿ ಎಷ್ಟಿವೆ (ವಲಯವಾರು ಮಾಹಿತಿ ನೀಡುವುದು) ?

## ಅರಣ್ಯ ಒತ್ತುವರಿ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೨೩ (೧೦೪೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅರಣ್ಯ ಜಮೀನು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಒತ್ತುವರಿ ಮಾಡಿರುವ ಒಟ್ಟು ವಿಸ್ತೀರ್ಣ ಎಷ್ಟು ;

(ಇ) ಒತ್ತುವರಿಯಲ್ಲಿ ಎಷ್ಟು ಜನ ಬಡವರು ಮನೆ ನಿರ್ಮಿಸಿ ಕೊಂಡಿರುವರು; ಒಂದು ಎಕರೆಗಿಂತ ಹೆಚ್ಚು ಒತ್ತುವರಿ ಮಾಡಿ ಕಾಫಿತೋಟ, ರೆಸಾರ್ಟ್ ಇತ್ಯಾದಿ ಉಪಯೋಗ ಮಾಡುತ್ತಿರುವವರ ಪೂರ್ಣ ವಿಳಾಸ, ವಿಸ್ತೀರ್ಣ ವಿವರ ನೀಡುವುದು ;

(ಈ) ಅಂತಹ ಜಮೀನನ್ನು ಒತ್ತುವರಿ ವಿಮುಕ್ತಿ ಮಾಡಿ ಸರ್ಕಾರ ವಾಪಸ್ಸು ಪಡೆಯಲು ತೆಗೆದುಕೊಂಡ ಕ್ರಮಗಳೇನು ?

## ಸಂಪರ್ಕ ಸೇತುವೆ ನಿರ್ಮಾಣ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೨೪ (೧೦೪೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಮನಗರ ಜಿಲ್ಲೆ, ಬಿಡದಿ ಟೌನ್ ಮತ್ತು ಕೆಂಚನಕುಪ್ಪೆ ಗ್ರಾಮದ ನಡುವೆ ನೆಲ್ಲಿ ಗುಡ್ಡದ ಕೆರೆ ಕೋಡಿ ಮತ್ತು ಅಕ್ಕಪಕ್ಕದ ಜಮೀನಿನ ನೀರು ಹರಿಯುವ ಹಳ್ಳಕ್ಕೆ ಸಂಪರ್ಕ ಸೇತುವೆ ನಿರ್ಮಾಣ ಮಾಡುವ ಬಗ್ಗೆ ಸ್ಥಳೀಯ ಜನರು ಮನವಿ ಮಾಡಿರುವುದು ನಿಜವೇ ;

(ಆ) ನಿಜವಾಗಿದ್ದರೆ, ಸರ್ಕಾರ ೨೦೧೪-೧೫ನೇ ಆಯವ್ಯಯದಲ್ಲಿ ಸಂಪರ್ಕ ಸೇತುವೆ ಕಾಮಗಾರಿಯನ್ನು ಪೂರ್ಣಗೊಳಿಸುವ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು ?

## ಕುಡಿಯುವ ನೀರು ಸರಬರಾಜು

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೮೨೫ (೧೦೪೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಎಷ್ಟು ಗ್ರಾಮಗಳಲ್ಲಿ ಪ್ರಸಕ್ತ ೨೦೧೪-೧೫ನೇ ಸಾಲಿನ ಬೇಸಿಗೆಯಲ್ಲಿ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡಲಾಗಿದೆ (ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಆ) ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಖರ್ಚಾಗಿರುವ ಅನುದಾನ ಎಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು) ?

## ತುಂಗಾ ನದಿ ಸೇತುವೆ ಅಗಲೀಕರಣ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೨೬ (೧೦೫೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೂಡ್ಲಿ–ಹೊಳೆಹೊನ್ನೂರು ಮಧ್ಯೆ ತುಂಗಾನದಿಗೆ ಇರುವ ಸೇತುವೆ ತುಂಬಾ ಕಿರಿದಾಗಿದ್ದು, ವಾಹನ ಸಂಚಾರಕ್ಕೆ ಸಮಸ್ಯೆಯಾಗಿ ಜನರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ತೊಂದರೆ ಬಗೆಹರಿಸಲು, ಸರ್ಕಾರದ ಮುಂದಿರುವ ಕ್ರಮಗಳೇನು (ವಿವರ ನೀಡುವುದು) ?

## ತುಂಗಾ ನದಿಗೆ ಮತ್ತೂರು–ಹೊಸಳ್ಳಿ ಮಧ್ಯೆ ಸೇತುವೆ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೨೭ (೧೦೫೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿವಮೊಗ್ಗ ತಾಲ್ಲೂಕಿನಲ್ಲಿ ತುಂಗಾನದಿಗೆ ಮತ್ತೂರು–ಹೊಸಳ್ಳಿ ಮಧ್ಯೆ ಅಡ್ಡಲಾಗಿ ಸೇತುವೆ ನಿರ್ಮಾಣ ಮಾಡಲು ಪ್ರಾರಂಭ ಯಾವಾಗ ಆಯಿತು ; ಅಂದಾಜು ಮೊಬಲಗು ಎಷ್ಟು ;

(ಆ) ಕಾಮಗಾರಿ ವಿಳಂಬವಾಗಲು ಕಾರಣವೇನು (ವಿವರ ನೀಡುವುದು) ;

(ಇ) ಕಾಮಗಾರಿ ಯಾವಾಗ ಪೂರ್ಣಗೊಳಿಸಲಾಗುವುದು ?

## ಜಮೀನುಗಳ ಸರ್ವೆ ನಿರ್ವಹಣೆ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೨೮ (೧೦೫೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ಭೂಮಿಯನ್ನು ಅರಣ್ಯ, ಕಂದಾಯ, ಸರ್ಕಾರಿ ಕೆರೆ, ಗೋಮಾಳ ಇತ್ಯಾದಿಯಾಗಿ ಸರ್ವೆ ಮಾಡಿಸಿರುವ ವರ್ಷ ಯಾವುದು ;

(ಆ) ಮೇಲ್ಕಂಡ ಸರ್ವೆಗನುಗುಣವಾಗಿ ಭೂಮಿಯನ್ನು ವರ್ಗೀಕರಣ ಮಾಡಲಾಗಿದ್ದಲ್ಲಿ, ಜಿಲ್ಲಾವಾರು ಮಾಹಿತಿಯನ್ನು ನೀಡುವುದು ;

(ಇ) ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಜಂಟಿ ಸರ್ವೆ ನಡೆಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ (ಹಾಗಿದ್ದಲ್ಲಿ, ವಿವರ ನೀಡುವುದು) ?

## ಮತ್ಸ್ಯ ಆಶ್ರಯ ಯೋಜನೆಯ ಮಾನದಂಡ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೨೯ (೧೦೫೭) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೪-೧೫ನೇ ಸಾಲಿನಲ್ಲಿ ಮೀನುಗಾರಿಕೆಗೆ ನೀಡುವ ಮತ್ಸ್ಯ ಆಶ್ರಯ ಯೋಜನೆಗೆ ಸರ್ಕಾರ ತಾಲ್ಲೂಕುವಾರು ನಿಗದಿಪಡಿಸಿದ ಗುರಿ ಎಷ್ಟು (ಜಿಲ್ಲಾವಾರು, ತಾಲ್ಲೂಕುವಾರು ಪೂರ್ಣ ವಿವರ ನೀಡುವುದು) ;

(ಆ) ಈ ಯೋಜನೆಗೆ ಫಲಾನುಭವಿಗಳನ್ನು ಆಯ್ಕೆ ಮಾಡಲು ಇರುವ ಮಾನದಂಡಗಳೇನು ;

(ಇ) ೨೦೧೩-೧೪ನೇ ಸಾಲಿನಲ್ಲಿ ಆಯ್ಕೆಗೊಂಡು ಪೂರ್ಣಗೊಳಿಸಿದ ಮನೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆಯೆ (ಉಡುಪಿ ಜಿಲ್ಲಾವಾರು, ಫಲಾನುಭವಿವಾರು, ತಾಲ್ಲೂಕುವಾರು ಪೂರ್ಣ ವಿವರ ನೀಡುವುದು) ;

(ಈ) ಬಿಡುಗಡೆಯಾಗದಿದ್ದಲ್ಲಿ, ಬಾಕಿಯಿರುವ ಮೊತ್ತವೆಷ್ಟು (ಉಡುಪಿ ಜಿಲ್ಲಾವಾರು, ತಾಲ್ಲೂಕುವಾರು, ಫಲಾನುಭವಿವಾರು ಪೂರ್ಣ ಮಾಹಿತಿ ನೀಡುವುದು) ?

## ಕೇರಳ ಮಾದರಿಯಲ್ಲಿ ಬಂದರು ನಿರ್ಮಾಣ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)** :-

೮೩೦ (೧೦೫೪) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮರವಂತೆ ಗ್ರಾಮದಲ್ಲಿ ಕೇರಳ ಮಾದರಿಯ ಬಂದರು ನಿರ್ಮಾಣಕ್ಕೆ ಸರ್ಕಾರ ಮೀಸಲಿರಿಸಿದ ಹಣವೆಷ್ಟು ;

(ಆ) ಇಲ್ಲಿಯವರೆಗೆ ಬಿಡುಗಡೆಯಾದ ಅನುದಾನವೆಷ್ಟು ; ಬಿಡುಗಡೆ ಮಾಡಬೇಕಾದ ಮೊತ್ತವೆಷ್ಟು ;

(ಇ) ಕಾಮಗಾರಿ ಯಾವ ಹಂತದಲ್ಲಿದೆ ;

(ಈ) ಸದರಿ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು (ಪೂರ್ಣ ವಿವರ ನೀಡುವುದು) ?

## ಮೀನುಗಾರರ ಮನೆಗಳಿಗೆ ಹಕ್ಕುಪತ್ರ ನೀಡಿಕೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೩೧ (೧೦೫೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉಡುಪಿ ಜಿಲ್ಲೆ ಮತ್ತು ತಾಲ್ಲೂಕು ಕೋಡಿ ಗ್ರಾಮದ ೨೦೦ಕ್ಕೂ ಹೆಚ್ಚು ಮಂದಿ ಬಡ ಮೀನುಗಾರರು ಕಡಲ ತಡಿಯಲ್ಲಿ ವಾಸವಿದ್ದು, ಸದರಿಯವರಿಗೆ ಹಕ್ಕುಪತ್ರ ನೀಡುವ ಪ್ರಸ್ತಾವನೆ ಹಿಂದಿನ ಸರ್ಕಾರದ ಸಚಿವ ಸಂಪುಟದಲ್ಲಿ ತೀರ್ಮಾನವಾಗಿದ್ದು, ಸದರಿಯವರಿಗೆ ಹಕ್ಕುಪತ್ರ ಯಾವಾಗ ನೀಡಲಾಗುವುದು ;

(ಆ) ಹಾಗೆ ಹಕ್ಕುಪತ್ರ ನೀಡುವ ಸಂದರ್ಭ ಸದರಿ ಪ್ರಕರಣದಲ್ಲಿ ಬಡ ಮೀನುಗಾರರೇ ಅವರ ವಾಸ್ತವ್ಯವಿರುವ ಜಾಗವನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಇ) ಸದರಿ ಮೀನುಗಾರರ ಕುಟುಂಬದ ಭೂ ಹಕ್ಕು ಸಮಸ್ಯೆ ಪರಿಹರಿಸಲು ಸರ್ಕಾರದ ನಿಲುವೇನು (ವಿವರ ನೀಡುವುದು) ?

## ಮೀಸಲು ಅರಣ್ಯಗಳ ಪುನರ್ ಸಮೀಕ್ಷೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೩೨ (೧೦೫೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಇತ್ತೀಚೆಗೆ ಸರ್ಕಾರ ಮೀಸಲು ಅರಣ್ಯಗಳ ಪುನರ್ ಸಮೀಕ್ಷೆ ಮಾಡಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿದೆಯೇ ;

(ಆ) ರಚಿಸಿದ್ದಲ್ಲಿ, ಯಾವ ಯಾವ ಜಿಲ್ಲೆಯಲ್ಲಿ ಸಮಿತಿಯನ್ನು ರಚಿಸಿದೆ (ಜಿಲ್ಲಾವಾರು ವಿವರ ನೀಡುವುದು) ;

(ಇ) ಸಮಿತಿ ರಚನೆಯು ಯಾವ ಜಿಲ್ಲೆಗಳಲ್ಲಿ ಕಾರ್ಯಪ್ರವೃತ್ತವಾಗಿದೆ (ಜಿಲ್ಲಾವಾರು ವಿವರ ನೀಡುವುದು) ;

(ಈ) ಕಾರ್ಯಪ್ರವೃತ್ತವಾಗದ ಜಿಲ್ಲೆಗಳು ಯಾವುವು ;

(ಉ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು (ಪೂರ್ಣ ವಿವರ ನೀಡುವುದು) ?

## ಸಣ್ಣ ನೀರಾವರಿ ಯೋಜನೆಗಳು

**ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೮೩೩ (೧೦೬೩) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತುಮಕೂರು ಜಿಲ್ಲೆಯಲ್ಲಿ ಪ್ರಸ್ತುತ ವರ್ಷದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕೈಗೆತ್ತಿ ಕೊಂಡಿರುವ ಕಾರ್ಯಕ್ರಮಗಳೇನು (ತಾಲ್ಲೂಕುವಾರು ವಿವರ ಕೊಡುವುದು) ;

(ಆ) ಹಾಗಿದ್ದಲ್ಲಿ, ಈ ವರ್ಷದಲ್ಲಿ ಹೊಸ ಕೆರೆಗಳ ನಿರ್ವಹಣೆಗೆ ಯಾವುವು ಸೇರ್ಪಡೆಯಾಗಿವೆ ;

(ಇ) ಕಳೆದ ಮೂರು ವರ್ಷದಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳು ಹಣವಿಲ್ಲದೆ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಅವು ಯಾವುವು ;

(ಈ) ಈ ವರ್ಷ ಪೂರ್ಣ ಹಣ ಬಿಡುಗಡೆ ಮಾಡಲಾಗುವುದೇ ?

## ಸರ್ಕಾರಿ ಜಾಗದಲ್ಲಿ ನಿರ್ಮಿಸಿರುವ ಅಕ್ರಮ ಕಟ್ಟಡ ತೆರವುಗೊಳಿಸುವುದು

**ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೮೩೪ (೧೦೬೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಸಿ.ಎಸ್. ಪುರ ಹೋಬಳಿ ಇಡಗೂರು ಗ್ರಾಮ ಸರ್ವೆ ನಂ. ೧೬೬ ಈ ಜಾಗ ಯಾರಿಗೆ ಸೇರಿರುತ್ತದೆ ;

(ಆ) ಈ ಜಾಗದಲ್ಲಿ ಸರ್ಕಾರ ನಿರ್ಮಾಣ ಮಾಡಿರುವ ಕಟ್ಟಡಗಳಾವುವು ;

(ಇ) ಸರ್ಕಾರಿ ಕಟ್ಟಡ ಹೊರತುಪಡಿಸಿ, ಸಾರ್ವಜನಿಕರು ಈ ಜಾಗದಲ್ಲಿ ಅಕ್ರಮ ಕಟ್ಟಡ ನಿರ್ಮಾಣ ಮಾಡಿದ್ದಾರೆಯೇ ; ಮಾಡಿದ್ದಲ್ಲಿ, ಅದರ ವಿವರ ನೀಡುವುದು ;

(ಈ) ಸರ್ಕಾರದ ಜಾಗದಲ್ಲಿ ಸಾರ್ವಜನಿಕವಾಗಿ ಕಟ್ಟಡ ನಿರ್ಮಾಣ ಮಾಡಲು ಅನುಮತಿ ನೀಡಲಾಗಿದೆಯೆ ;

(ಉ) ಹಾಗಿದ್ದಲ್ಲಿ, ಈ ಅಕ್ರಮ ಕಟ್ಟಡಗಳನ್ನು ಸರ್ಕಾರ ಇದುವರೆವಿಗೂ ವಶಪಡಿಸಿಕೊಳ್ಳದೆ ಇರಲು ಕಾರಣವೇನು ; ಯಾವಾಗ ಕ್ರಮ ಜರುಗಿಸಲಾಗುವುದು ?

## ಹೇಮಾವತಿ ನೀರಿನ ಲಭ್ಯತೆ

**ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೮೩೫ (೧೦೬೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೇಮಾವತಿ ಜಲಾಶಯ ಯಾವಾಗ ಪ್ರಾರಂಭವಾಯಿತು ;

(ಆ) ಈ ಜಲಾಶಯದ ನೀರಿನ ಲಭ್ಯತೆ ಎಷ್ಟು ; ಜಲಾಶಯದ ನೀರು ಯಾವ ಮಾನದಂಡದ ಮೇಲೆ ಬಳಕೆಯಾಗುತ್ತಿದೆ (ಪೂರ್ಣ ವಿವರ ಕೊಡುವುದು) ;

(ಇ) ಕಳೆದ ಮೂರು ವರ್ಷಗಳಿಂದ ತುಮಕೂರು ಜಿಲ್ಲೆಗೆ ಕುಡಿಯುವ ನೀರು ಪೂರೈಕೆಗೆ ಬಂದಿರುವ ಬೇಡಿಕೆಗಳೆಷ್ಟು ; ಎಷ್ಟು ಪ್ರಕರಣಗಳಿಗೆ ಮಂಜೂರಾತಿ ನೀಡಲಾಗಿದೆ ; ಬಾಕಿ ಉಳಿದಿರುವ ಪ್ರಕರಣಗಳೆಷ್ಟು ;

(ಈ) ಏತ ನೀರಾವರಿಗೆ ಮಂಜೂರಾತಿ ನೀಡಿರುವ ಪ್ರಕರಣಗಳು ಯಾವುವು ; ಬೇಡಿಕೆ ಬಂದಿರುವ ಬೇಡಿಕೆಗಳೆಷ್ಟು ; ಯಾವುವು (ವಿವರ ಕೊಡುವುದು) ?

## ಗ್ರಾಮಗಳಲ್ಲಿ ಆನೆಗಳ ಪ್ರವೇಶದಿಂದಾಗಿ ಬೆಳೆ/ಜೀವ ಹಾನಿ

**ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೮೩೬ (೧೦೫೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೫ ವರ್ಷಗಳಿಂದ ತುಮಕೂರು ಜಿಲ್ಲೆಗೆ ಪದೇ–ಪದೇ ಆನೆಗಳು ನುಗ್ಗಿ ಪ್ರಾಣಹಾನಿ, ಬೆಳೆಹಾನಿ ಉಂಟು ಮಾಡುತ್ತಿರುವ ಪ್ರಕರಣಗಳೆಷ್ಟು ;

(ಆ) ಅರಣ್ಯ ಇಲಾಖೆ ಸಮಗ್ರವಾಗಿ ಕೆಲಸ ಮಾಡುತ್ತಿದ್ದರೂ, ಈ ರೀತಿ ಆನೆಗಳು ನುಗ್ಗಿ ದಾಂಧಲೆ ಮಾಡಲು ಕಾರಣವೇನು ;

(ಇ) ಇಂತಹ ಪ್ರಕರಣಗಳು ಪುನರ್ಘಟಿಸದಂತೆ ಕ್ರಮ ಕೈಗೊಳ್ಳದಿರಲು ಕಾರಣವೇನು ;

(ಈ) ಜಿಲ್ಲೆಯಲ್ಲಿ ಸಿಬ್ಬಂದಿ ಕೊರತೆಯಿದೆಯೇ ; ತಾಲ್ಲೂಕುವಾರು ಸಿಬ್ಬಂದಿಯ ವಿವರ ಕೊಡುವುದು ;

(ಉ) ಆನೆಗಳು ಬರದಂತೆ ಕೂಡಲೇ ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ ?

## ಇನಾಂ ಭೂಮಿ ಒತ್ತುವರಿ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೮೩೭ (೧೦೩೨) ಮಾನ್ಯ ಅರಣ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

(ಅ) ಕಳಸ ಇನಾಂ ಭೂಮಿ ಒತ್ತುವರಿ ವಿಚಾರದಲ್ಲಿ ಹೈಕೋರ್ಟ್ ನೀಡಿದ್ದ ತೀರ್ಪಿನಲ್ಲಿರುವ ಪ್ರಮುಖ ಅಂಶಗಳೇನು ;

(ಆ) ಈ ತೀರ್ಪಿನಲ್ಲಿ ಒಟ್ಟು ಯಾವ, ಯಾವ ಪ್ರದೇಶಗಳು ಮತ್ತು ಎಷ್ಟು ಎಕರೆ ಪ್ರದೇಶ ಸೇರಿರುತ್ತದೆ ;

(ಇ) ಸದರಿ ತೀರ್ಪನ್ನಾಧರಿಸಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ;

(ಈ) ಸದರಿ ತೀರ್ಪನ್ನಾಧರಿಸಿ ಮರಗಳನ್ನು ಕಡಿದಿರುವುದು ನಿಜವೇ ; ನಿಜವಾದಲ್ಲಿ, ಈಗಾಗಲೇ ಎಷ್ಟು ಎಕರೆ ಪ್ರದೇಶದ ಮರಗಳನ್ನು ಕಡಿಯಲಾಗಿದೆ ?

## ರಾಜ್ಯದಲ್ಲಿ ಎಷ್ಟು ಜಿಲ್ಲೆಗಳಲ್ಲಿ ಕಂದಾಯ ಇಲಾಖೆಯಲ್ಲಿ ಪಿ.ಎಲ್.ಓ. ಪದ್ಧತಿ ಜಾರಿಯಲ್ಲಿ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ** (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ **ಚುನಾಯಿತರಾದವರು**) :-

೮೩೮ (೧೦೫೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಎಷ್ಟು ಜಿಲ್ಲೆಗಳ ಕಂದಾಯ ಇಲಾಖೆ ಕಛೇರಿಗಳಲ್ಲಿ ಪಿ.ಎಲ್.ಓ (ಪೇಪರ್ ಲೆಸ್ ಆಫೀಸ್) ಪದ್ಧತಿ ಜಾರಿಯಲ್ಲಿದೆ (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಪಿ.ಎಲ್.ಓ. ಪದ್ಧತಿಯ ಮುಖ್ಯ ಉದ್ದೇಶವೇನು ;

(ಇ) ಈ ಪದ್ಧತಿ ಜಾರಿಯಲ್ಲಿರುವ ಜಿಲ್ಲೆಗಳ ಕಂದಾಯ ಇಲಾಖೆ ಕಛೇರಿಯಲ್ಲಿನ ಕಡತಗಳ ವಿಲೇವಾರಿ ಮಾಹಿತಿ ನೀಡುವುದು (ಪ್ರಸಕ್ತ ದಿನಾಂಕದವರೆಗೆ, ಸ್ವೀಕೃತಿ, ವಿಲೇವಾರಿ, ಬಾಕಿ ವಿವರ) ;

(ಈ) ಬಾಕಿ ಉಳಿದಿರುವ ಕಡತಗಳು ಎಷ್ಟು ದಿನಗಳಿಂದ, ಯಾರ ಬಳಿ ಬಾಕಿ ಉಳಿದಿವೆ ಎಂಬ ವಿವರಣೆ ನೀಡುವುದು (ನ್ಯಾಯಾಲಯ ಪ್ರಕರಣಗಳನ್ನು ಹೊರತುಪಡಿಸಿ) ;

(ಉ) ಪಿ.ಎಲ್.ಓ. ಪದ್ಧತಿ ಅನುಷ್ಠಾನಕ್ಕೆ ತಗುಲಿದ ವೆಚ್ಚ ಎಷ್ಟು ;

(ಊ) ಪಿ.ಎಲ್.ಓ. ಪದ್ಧತಿಯ ನಿರ್ವಹಣೆಗೆ ಪ್ರತಿ ತಿಂಗಳು ತಗುಲುತ್ತಿರುವ ಖರ್ಚು ಎಷ್ಟು (ವಿವರಗಳನ್ನು ನೀಡುವುದು) ?

## ಬಾಲ ಕಾರ್ಮಿಕ ಯೋಜನೆಯ ಸಿಬ್ಬಂದಿ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೩೯ (೧೦೪೯) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಾರ್ಮಿಕ ಇಲಾಖೆಯಲ್ಲಿ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಬಾಲಕಾರ್ಮಿಕ ಯೋಜನೆಯ ಸಿಬ್ಬಂದಿಯು ಕಳೆದ ೧೦-೧೫ ವರ್ಷಗಳಿಂದ ಆಯಾ ಜಿಲ್ಲಾ ಕೇಂದ್ರದ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಸಿಬ್ಬಂದಿಗೆ ಸರ್ಕಾರದಿಂದ ಯಾವ ರೀತಿ ಸೇವಾ ಭದ್ರತೆಯನ್ನು ಒದಗಿಸಲಾಗಿದೆ ; ಇವರಿಗೆ ಇದುವರೆಗೂ ನೀಡಿರುವ ಸೌಲಭ್ಯಗಳೇನು ;

(ಈ) ಈ ಸಿಬ್ಬಂದಿಗಳನ್ನು ಖಾಯಂಗೊಳಿಸಲು ಸರ್ಕಾರ/ಕಾರ್ಮಿಕ ಇಲಾಖೆಯಿಂದ ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ ?

## ಕೆರೆಗಳ ದುರಸ್ತಿ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೮೪೦ (೧೦೪೮) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನಲ್ಲಿರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು ;

(ಆ) ಅವುಗಳಲ್ಲಿ ದುರಸ್ತಿಯಾಗಬೇಕಾದ ಕೆರೆಗಳ ಸಂಖ್ಯೆ ಎಷ್ಟು ;

(ಇ) ೨೦೧೨–೧೩ ಮತ್ತು ೨೦೧೩–೧೪ ರಲ್ಲಿ ಸಣ್ಣ ನೀರಾವರಿ ಇಲಾಖೆಗೆ ಕೆರೆ ದುರಸ್ತಿಗಾಗಿ ಸ್ವೀಕೃತವಾದ ಅನುದಾನ ಎಷ್ಟು ;

(ಈ) ಅನುದಾನ ಸ್ವೀಕೃತವಾಗಿದ್ದರೂ ಕೆರೆ ದುರಸ್ತಿ ಕಾರ್ಯ ಕೈಗೊಳ್ಳದಿರುವುದಕ್ಕೆ ಇರುವ ಕಾರಣಗಳೇನು ;

(ಉ) ಕೆರೆ ದುರಸ್ತಿಗಾಗಿ ಅನುದಾನ ಸ್ವೀಕೃತವಾಗದೇ ಇದ್ದಲ್ಲಿ, ಅನುದಾನ ಬಿಡುಗಡೆಗೊಳಿಸಲು ಸರ್ಕಾರಕ್ಕೆ ಇರುವ ಅಡೆತಡೆಗಳೇನು ?

## "ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ" ಸ್ಥಾಪನೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೮೪೧ (೧೦೧೫) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ "ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ" ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಈ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ ಕೆರೆಗಳ ವಿವರ ನೀಡುವುದು (ಸಣ್ಣ ಕೆರೆ, ದೊಡ್ಡ ಕೆರೆ, ನದಿಗಳು ಇತ್ಯಾದಿ) ;

(ಆ) ಕೆರೆಗಳ ಒತ್ತುವರಿದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವ ಮತ್ತು ಶಿಕ್ಷಿಸುವ ಶಾಸನಾತ್ಮಕ ಅಧಿಕಾರವನ್ನು ಪ್ರಾಧಿಕಾರಕ್ಕೆ ನೀಡಲಾಗುತ್ತಿದೆಯೇ ; ಯಾವ ಕ್ರಮ ಮತ್ತು ಎಷ್ಟು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗುವ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು ;

(ಇ) ರಾಜ್ಯದಲ್ಲಿ ಒಂದು ಕಾಲದ ಮಾಹಿತಿಯ ಪ್ರಕಾರ ಸುಮಾರು ೩೯ ಸಾವಿರ ಕೆರೆಗಳಿರುವುದು ತಿಳಿದುಬಂದಿದ್ದು, ಇದು ನಿಜವೆ ; ಹಾಗಿದ್ದಲ್ಲಿ, ಈಗಿರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು ; ಅವುಗಳಲ್ಲಿ ಅತಿಕ್ರಮಣವಾಗಿರುವ ಕೆರೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಈ) ಕೆರೆಗಳ ಅತಿಕ್ರಮಣ ಮಾಡಿರುವವರ ವಿರುದ್ಧ ಇದುವರೆಗೆ ಕೈಗೊಂಡಿರುವ ಕ್ರಮವೇನು ; ಸರ್ಕಾರ ಕೆರೆಗಳ ಸಂರಕ್ಷಣೆಗಾಗಿ ರೂಪಿಸಿರುವ ಯೋಜನೆ ಯಾವುವು (ವಿವರ ನೀಡುವುದು) ?

## ಗ್ರಾಮೀಣ ಪ್ರದೇಶದಲ್ಲಿ ಅಕ್ರಮ ಸಕ್ರಮ ಯೋಜನೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೮೪೨ (೧೦೧೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಇತ್ತೀಚೆಗೆ ಅಕ್ರಮ-ಸಕ್ರಮ ಯೋಜನೆ ಜಾರಿಯಾಗಿರುವುದು ಯಾವಾಗ ; ಇದನ್ನು ಕಾರ್ಯಾರಂಭ ಮಾಡಿರುವುದು ಯಾವಾಗ (ವಿವರಿಸುವುದು) ;

(ಆ) ನಗರ ಪ್ರದೇಶಗಳನ್ನು ಹೊರತುಪಡಿಸಿ ಗ್ರಾಮೀಣ ಪ್ರದೇಶಗಳಿಗೆ ಮಾತ್ರ ಸೀಮಿತಗೊಳಿಸಿ ಆದೇಶ ಹೊರಡಿಸಿರುವುದು ನಿಜವೇ ; ಇದರಿಂದ ಸಾರ್ವಜನಿಕರ ಹಿತ ಕಾಪಾಡಲು ಸಾಧ್ಯವೆ (ವಿವರಿಸುವುದು) ;

(ಇ) ಅಕ್ರಮ-ಸಕ್ರಮ ಯೋಜನೆಯ ಅರ್ಜಿಗಳನ್ನು ಪಡೆಯಲು ದಿನಾಂಕ ೨೮-೫-೨೦೧೪ ರಿಂದ ೩-೬-೨೦೧೪ ರವರೆಗೆ ಒಂದು ರಜೆ ದಿವಸ ಹೊರತುಪಡಿಸಿ ಕೇವಲ ೬ ದಿವಸಗಳ ಸಮಯ ನಿಗದಿಪಡಿಸಿರುವುದು ಸರಿಯೇ ; ಅರ್ಜಿದಾರರು ದಾಖಲೆಗಳನ್ನು ಸಿದ್ಧಪಡಿಸಿ ಅರ್ಜಿ ನೋಂದಾಯಿಸಲು ಸಮಯದ ಅಭಾವ ಉಂಟಾಗಿ ರಾಜ್ಯದ ಹಲವಡೆ ಗಲಭೆಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದರ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಮುಂದಿನ ಕ್ರಮಗಳೇನು (ವಿವರಿಸುವುದು) ;

(ಈ) ಸರ್ಕಾರ ನಿಗದಿಪಡಿಸಿದ ಕಾಲಾವಧಿಯಲ್ಲಿ ಎಷ್ಟು ಅರ್ಜಿಗಳು ಸ್ವೀಕೃತಿಯಾಗಿವೆ ; ಅವುಗಳನ್ನು ಸಕ್ರಮಗೊಳಿಸುವ ಕಾರ್ಯ ಜಾರಿಯಲ್ಲಿದೆಯೇ ; ಇಲ್ಲದಿದ್ದಲ್ಲಿ ಸಕ್ರಮಗೊಳಿಸುವುದು ಯಾವಾಗ (ವಿವರ ನೀಡುವುದು) ?

## ಕೆರೆಗಳಿಗೆ ಕಬಿನಿ ಮೂಲದಿಂದ ನೀರು

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೪೩ (೧೦೩೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಚಾಮರಾಜನಗರ ಜಿಲ್ಲೆಯ ಕೆರೆಗಳಿಗೆ ಕಬಿನಿ ಮೂಲದಿಂದ ನೀರು ತುಂಬಿಸುವ ಯೋಜನೆ ಯಾವ ಆಯವ್ಯಯ ಪತ್ರದಲ್ಲಿ ಘೋಷಣೆ ಆಯಿತು ; ಈ ಯೋಜನೆ ಯಾವಾಗ ಪ್ರಾರಂಭವಾಗಿ ಯಾವಾಗ ಮುಗಿಯಬೇಕಾಗಿತ್ತು ; ಈ ಕಾಮಗಾರಿ ಯಾವ ಹಂತದಲ್ಲಿದೆ ; ಇದಕ್ಕೆ ನಿಗದಿ ಪಡಿಸಿರುವ ಆಯವ್ಯಯ ಎಷ್ಟು (ವಿವರ ಒದಗಿಸುವುದು) ;

(ಆ) ಈ ಯೋಜನೆ ವ್ಯಾಪ್ತಿಗೆ ಬರುವ ಕೆರೆಗಳು ಮತ್ತು ಇದರಿಂದ ಪ್ರಯೋಜನೆ ಪಡೆಯುವ ಗ್ರಾಮಗಳು ಯಾವುವು ; ಕಾಮಗಾರಿ ವಿಳಂಬಕ್ಕೆ ಕಾರಣಗಳೇನು ; ಯಾವಾಗ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು ?

## ಕಾಡ್ಗಿಚ್ಚಿಗೆ ತುತ್ತಾಗುತ್ತಿರುವ

**ಶ್ರೀ ಕೆ. ಗೋವಿಂದರಾಜ್(ವಿಧಾನಸಭೆಯಿಂದ ಚುನಾಯಿತರಾದವರು) :-**

೮೪೪ (೧೦೨೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ಕಾಡ್ಗಿಚ್ಚಿಗೆ ತುತ್ತಾದ ಪ್ರಕರಣಗಳ ಅಂದಾಜು ಸರ್ಕಾರಕ್ಕೆ ಇದೆಯೇ ;

ಅರಣ್ಯ ಪ್ರದೇಶಗಳ ವಿಸ್ತೀರ್ಣ, ಆಗಿರಬಹುದಾದ ನಷ್ಟದ ಅಂದಾಜು ಕುರಿತಂತೆ ಪ್ರತ್ಯೇಕ ಮಾಹಿತಿ ಒದಗಿಸುವುದು ;

(ಆ) ಕಾಡ್ಗಿಚ್ಚಿಗೆ ಕಾರಣವಾದ ಅಂಶಗಳು ಯಾವುವು ; ಇವುಗಳಿಗೆ ಕೆಲವು ವೈಯಕ್ತಿಕ ಹಿತಾಸಕ್ತಿ ವ್ಯಕ್ತಿಗಳು ಕಾರಣವಾಗಿರುವ ಅಂಶಗಳನ್ನು ಸರ್ಕಾರ ಗಮನಿಸಿದೆಯೇ ; ಹಾಗಿದ್ದಲ್ಲಿ, ಅವುಗಳ ಸಂಪೂರ್ಣ ಮಾಹಿತಿ ಒದಗಿಸುವುದು ;

(ಇ) ಕಾಡ್ಗಿಚ್ಚನ್ನು ನಂದಿಸುವ ನಿಟ್ಟಿನಲ್ಲಿ ಪ್ರಸ್ತುತ ಯಂತ್ರೋಪಕರಣಗಳ ಕೊರತೆ ಹಾಗೂ ಇಚ್ಛಾಶಕ್ತಿಯ ಕೊರತೆ ಇರುವುದು ನಿಜವೇ (ಮಾಹಿತಿ ಒದಗಿಸುವುದು) ?

**ಫಡಾ ಜಮೀನುಗಳು**

**ಡಾ॥ ಎಂ.ಆರ್. ಹುಲಿನಾಯ್ಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೮೪೫ (೧೦೨೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆಯಲ್ಲಿರುವ ಫಡಾ ಜಮೀನುಗಳ ವಿವರವನ್ನು ತಾಲ್ಲೂಕುವಾರು ನೀಡುವುದು ;

(ಆ) ತುಮಕೂರು ತಾಲ್ಲೂಕು, ಕೋರಾ ಹೋಬಳಿ ನಾಗೇನಹಳ್ಳಿ ಸರ್ವೆ ನಂಬರ್ ೧೬ ಹಾಗೂ ಸರ್ವೆ ನಂಬರ್ ೧೭ರ ಹಿಡುವಳಿ ಫಡಾ ಜಮೀನು ರೆಸ್ಟೋರೆಂಟ್ ಮಾಡಿ ಪಹಣಿಯಲ್ಲಿ ಫಡಾ ಶಬ್ದ ತೆಗೆದು ಮೂಲ ಖಾತೆದಾರರ ವಂಚಿತರ ಹೆಸರು ನಮೂದಿಸಲು ಸರ್ಕಾರದ ಆದೇಶವಾಗಿದ್ದರೂ ಸಹ ಜಿಲ್ಲಾಧಿಕಾರಿಗಳು, ತಹಶೀಲ್ದಾರ್ ವಿಳಂಬ ಮಾಡುವುದಕ್ಕೆ ಕಾರಣವೇನು (ವಿವರದೊಂದಿಗೆ) ?

ವಿ. ಶ್ರೀಶ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59/ಕಾ.ಸೂ. 03374/1000 ಪ್ರತಿಗಳು/05-07-2014